# ಗಾದೆಗಳ ಲೋಕ

ಎಚ್. ಎಚ್. ಗಂಗಾಧರಾಚಾರ್

ತನಗೆ ಸೇರದೆ ಇದ್ದರೆ ಊರಿಗೆಲ್ಲಾ ಸೇರುವುದಿಲ್ಲವೇ

ಕಡ ಹುಟ್ಟಿ ಬಡವ ಕೆಟ್ಟ

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದನಂತೆ

ಬಡವನ ಸಿಟ್ಟು ದವಡೆಗೆ ಮೂಲ

ಬಲಗೈ ಕೊಟ್ಟ ದಾನ ಎಡಗೈಗೆ ಗೊತ್ತಾಗಬಾರದು

ತಾಯಿಯಂತೆ ಮಗಳು ನೂಲಿನಂತೆ ಸೀರೆ

ಹೆತ್ತವರಿಗೆ ಹೆಗ್ಗಣ ಮುದ್ದು, ಕೂಡಿದವರಿಗೆ ಕೋಡಗ ಮುದು

ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆ ಮೇಲು

# ಗಾದೆಗಳ ಲೋಕ

(ಸಂಗ್ರಹ ಮತ್ತು ಅರ್ಥ ವಿವರಣೆ)

ಎಚ್. ಎಚ್. ಗಂಗಾಧರಾಚಾರ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

**Gadegala Loka- By H. H. Gangadharachar** Published by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033. Janapada Loka : 27201143.

ಪ್ರಥಮ ಮುದ್ರಣ : ೨೦೧೨ ಪುಟಗಳು : ೪೪

ಪ್ರತಿಗಳು : ೧೦೦೦

ಬೆಲೆ : **ರೂ. ೨೦** (ಇಪ್ಪತ್ತು ರೂಪಾಯಿಗಳು)

**ಹಕ್ಕುಗಳು : ಲೇಖಕರಿಗೆ ಸೇರಿವೆ**

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ಶ್ರೀ ಟಿ. ತಿಮ್ಮೇಗೌಡ** | ಅಧ್ಯಕ್ಷರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಸಹಸಂಪಾದಕರು |
| **ಡಾ. ರಾಜೇಗೌಡ ಹೊಸಹಳ್ಳಿ** | ಗೌರವ ಕಾರ್ಯದರ್ಶಿ |

ಮುದ್ರಕರು :

**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು– ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಲೇಖಕರಾದ **ಶ್ರೀ ಎಚ್. ಎಚ್. ಗಂಗಾಧರಾಚಾರ್** ಅವರು **ಗಾದೆಗಳ ಲೋಕ** ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಟಿ. ತಿಮ್ಮೇಗೌಡ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೫-೦೪-೨೦೧೨

# ಲೇಖಕರ ಮಾತು

'ಗಾದೆಗಳ ಲೋಕದಲ್ಲಿ' ಜಾನಪದ ಸಾಹಿತ್ಯದ ಬಗ್ಗೆ ಬರೆದ ನನ್ನ ಮೊದಲ ಕೃತಿ. ಈ ಮೊದಲು ನಾನು ಕಥೆ, ಕವನ, ಲೇಖನಗಳನ್ನು ಬರೆದುಕೊಂಡಿದ್ದೆ. ನಾನು ಕನ್ನಡ ಎಂ. ಎ. ತರಗತಿಯಲ್ಲಿ ಓದುತ್ತಿದ್ದಾಗ ಅದರಲ್ಲಿ ಜಾನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಒಂದು ಪತ್ರ್ಯವಿದ್ದಿತು. ಅದನ್ನು ಓದಿದ ಮೇಲೆ ಜಾನಪದ ಸಾಹಿತ್ಯದ ಬಗ್ಗೆ ನಾನೂ ಏನಾದರೂ ಬರೆಯಬೇಕೆಂದೆನಿಸಿತು. ನಾನು ಹುಡುಗನಾಗಿದ್ದಾಗಿನಿಂದ ಕಲೆ ಹಾಕಿದ್ದ ಸಾಕಷ್ಟು ಗಾದೆಗಳು ನನ್ನ ಬಳಿ ಇದ್ದವು. ಅವುಗಳೆಲ್ಲವನ್ನೂ ಸಂಗ್ರಹ ಮಾಡಿ ಅವುಗಳ ಅರ್ಥವನ್ನು ಸಂಕ್ಷಿಪ್ತವಾಗಿ ಬರೆದು ಪ್ರಕಟಿಸಬೇಕೆನಿಸಿತು. ಆ ಪ್ರಯತ್ನದ ಫಲವೇ ಈ ಪುಸ್ತಕ ರೂಪದಲ್ಲಿ ಬರಲು ಕಾರಣವಾಯಿತು.

ಈ ಕೃತಿಯ ಬಗ್ಗೆ ಕೇಳಿದಾಗ ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ಇದರ ಕಾರ್ಯದರ್ಶಿಗಳಾದ ಸನ್ಮಾನ್ಯ ಡಾ॥ ಚಕ್ಕೆರೆ ಶಿವಶಂಕರ್ ಅವರು ಉದಾರ ಮನಸ್ಸಿನಿಂದ ಒಪ್ಪಿಕೊಂಡು ಈ ಕೃತಿಯನ್ನು ಪ್ರಕಟಣೆಗೆ ಇಳಿಸಿದ್ದಾರೆ. ಅವರ ಸಹಕಾರಕ್ಕೆ ನಾನು ಅವರಿಗೆ ಚಿರರುಣಿಯಾಗಿದ್ದೇನೆ. ಅದೇ ರೀತಿ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಸದಸ್ಯರುಗಳಿಗೂ, ಈ ಕೃತಿಯ ಪ್ರಕಟಣೆಗೆ ಒಪ್ಪಿಗೆ ಸೂಚಿಸಿದ್ದಕ್ಕಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಎಚ್. ಎಚ್. ಗಂಗಾಧರಾಚಾರ್**

ತಿಪಟೂರು–572202

# ಗಾದೆಗಳ ಲೋಕ

**ಪೀಠಿಕೆ**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಅಂದರೆ ಗಾದೆಗಳು ಪ್ರಾಚೀನ ಹಾಗೂ ಸತ್ಯಕ್ಕೆ ಹೆಚ್ಚು ಹತ್ತಿರವಾದವುಗಳು ಎಂದ ಹಾಗಾಯಿತು. ಗಾದೆಗಳು ಜನಮಾನಸದಲ್ಲಿ ಸ್ಥಾಯಿಯಾಗಿ ನಿಂತ ಅನುಭವದ ನುಡಿಗಳು. ಅವು ಮನುಷ್ಯರ ನೂರಾರು ವರ್ಷಗಳ ಅನುಭವದ ಆಧಾರದಲ್ಲಿ ನಿರ್ಮಿತವಾದ ನುಡಿಗಟ್ಟುಗಳು. ಹಾಗಾಗಿ ಇವುಗಳಲ್ಲಿರುವ ಹೇಳಿಕೆಗಳು ಸತ್ಯವೆಂದೇ ಜನ ಪರಿಗಣಿಸುತ್ತಾರೆ. ಜನರ ಸಂಭಾಷಣೆಗಳಲ್ಲಿ ಅಪ್ರಯತ್ನಪೂರ್ವಕವಾಗಿ ಗಾದೆಗಳು ನುಸುಳುತ್ತವೆ. ಇವು ಭಾಷೆಗೆ ಒಂದು ಸೊಗಡನ್ನು ನೀಡುತ್ತವೆ. ಒಂದು ಪ್ರಾದೇಶಿಕತೆಯ ಮೆರುಗನ್ನೂ ನೀಡುತ್ತವೆ. ಗಾದೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದೂ ಉಂಟು. ಒಂದೇ ಅರ್ಥಬರುವ ಗಾದೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನರೂಪದಲ್ಲಿ ಬಳಕೆಯಾಗಿರುವುದುಂಟು. ಗಾದೆಗಳು ಕನ್ನಡ ಭಾಷೆಯಲ್ಲಿ ಮಾತ್ರವಲ್ಲ ಎಲ್ಲಾ ಭಾಷೆಗಳಲ್ಲೂ ಇದೆ. ಇಂಗ್ಲೀಷ್‌ನಲ್ಲಿಯೂ ಕನ್ನಡದ ಗಾದೆಗಳಿಗೆ ಸಮಾನವಾದ ಅನೇಕ ಗಾದೆಗಳಿವೆ. ಇದರಿಂದ ಒಂದು ಸಂಗತಿ ತಿಳಿದು ಬರುವುದೇನೆಂದರೆ, ಭಾಷೆಗಳು ಬದಲಾದರೂ ಜನರ ಜೀವನ, ಪದ್ಧತಿಗಳಲ್ಲಿನ ಭಾವನೆಗಳು ಸಮಾನವಾಗಿವೆ. ಉದಾಹರಣೆಗೆ ಮನಸ್ಸನ್ನು ಕುರಿತು ಇಂಗ್ಲೀಷ್ ಭಾಷೆಯಲ್ಲಿ "where there is a will, there is a way" ಅಂದರೆ ಕನ್ನಡದಲ್ಲಿ "ಮನಸ್ಸಿದ್ದರೆ ಮಾರ್ಗ" ಎನ್ನುತ್ತೇವೆ. ಅಂದರೆ ಮನುಷ್ಯನ ಶಕ್ತಿ ಇಂಗ್ಲೀಷಿನವನಾದರೇನು ? ಕನ್ನಡಿಗನಾದರೇನು ? ಒಂದೇ ಅಲ್ಲವೇ ? ಗಾದೆಗಳು ಆಯಾ ಭಾಷೆಗಳ ಜನಗಳ ಜಾಯಮಾನಕ್ಕನುಗುಣವಾಗಿ ರೂಪುಗೊಂಡಿವೆ.

"ವೇದಗಳು ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ" ಎಂಬುದು ಮತ್ತೊಂದು ಹೇಳಿಕೆ. ಅಂದರೆ ಗಾದೆ ಸತ್ಯಕ್ಕೆ ಹೆಚ್ಚು ಹತ್ತಿರವಾದದ್ದು ಎಂಬುದು ಇದರ ಅರ್ಥ. ಗಾದೆಗಳು ಅನುಭವದ ನುಡಿಗಳಾದುದರಿಂದ ಸತ್ಯಕ್ಕೆ ಅತಿ

ಸಮೀಪದಲ್ಲಿರುತ್ತವೆ. ಇವು ಜನರಿಂದ ಜನರಿಗೆ ಮಾತಿನ ಮೂಲಕ ಹರಿದು ಬಂದಿರುತ್ತವೆ. ಹಾಗಾಗಿ ಇವು ಬರವಣಿಗೆಯ ರೂಪವಿಲ್ಲದೆ ಮೌಖಿಕ ರೂಪದಲ್ಲಿ ಹೆಚ್ಚು ಬಳಕೆಯಲ್ಲಿವೆ. ಶತಶತಮಾನಗಳಿಂದ ಇವು ಮೌಖಿಕ ರೂಪದಲ್ಲೇ ಬಳಕೆಯಲ್ಲಿದ್ದು ಜನ ಇವುಗಳನ್ನು ನೆನಪಿಟ್ಟುಕೊಂಡು ಸಂರಕ್ಷಿಸಿಕೊಂಡು ಬಂದಿದ್ದಾರೆ. ತಲೆಮಾರುಗಳಿಂದ ತಲೆಮಾರಿಗೆ ಮೌಖಿಕವಾಗಿಯೇ ವರ್ಗಾಯಿಸಲ್ಪಟ್ಟಿದೆ. ಗಾದೆಗಳು ಜನಪದ ಸಾಹಿತ್ಯದ ಪ್ರಮುಖ ಪ್ರಕಾರವಾಗಿದೆ. ಆಧುನಿಕ ಕಾಲದಲ್ಲಿ ವಿದ್ವಾಂಸರು ಈ ಗಾದೆಗಳ ನುಡಿಗಟ್ಟುಗಳನ್ನು ಬರಹ ರೂಪದಲ್ಲಿ ಸಂಗ್ರಹಿಸಲು ಪ್ರಾರಂಭಿಸಿದ್ದಾರೆ. ಹಾಗಾಗಿ ಅನೇಕ ಕನ್ನಡದ ಗಾದೆಗಳ ಸಂಗ್ರಹಗಳು ಪ್ರಕಟವಾಗಿದೆ. ಇವು ಜನಪದ ಸಾಹಿತ್ಯಕ್ಕೆ ವಿದ್ವಾಂಸರು ಕೊಟ್ಟ ಅಮೂಲ್ಯ ಕಾಣಿಕೆಗಳಾಗಿವೆ. ಎಷ್ಟು ಗಾದೆಗಳನ್ನು ಸಂಗ್ರಹಿಸಿದರೂ ಇನ್ನೂ ಸಂಗ್ರಹಿಸಬೇಕಾದ ಗಾದೆಗಳು ಉಳಿದೇ ಇವೆ. ಹಾಗೆ ನೋಡಿದರೆ ಇವು ಸಂಗ್ರಹಿಸಿದಷ್ಟೂ ಬೆಳೆಯುತ್ತಲೇ ಇವೆ. ಹಳೆಯ ಗಾದೆಗಳ ಜೊತೆಗೆ ಹೊಸ ಹೊಸ ಗಾದೆಗಳು ಹುಟ್ಟಿಕೊಳ್ಳುತ್ತಿವೆ. ಆಧುನಿಕ ಜೀವನ ಪದ್ಧತಿ–ನಂಬಿಕೆಗಳಿಗನುಗುಣವಾಗಿ ಹೊಸ ಹೊಸ ಗಾದೆಗಳು ನಿರಂತರವಾಗಿ ಸೃಷ್ಟಿಯಾಗುತ್ತಲೇ ಇವೆ. ಗಾದೆಗಳ ಸಂಗ್ರಹ ಮತ್ತು ಬಳಕೆಗಳು ಹೆಚ್ಚುತ್ತಲೇ ಇವೆ. ಇಲ್ಲಿ ಪ್ರಾಚೀನ ಗಾದೆಗಳು ಮತ್ತು ಆಧುನಿಕ ಗಾದೆಗಳು ಎಂಬ ವರ್ಗೀಕರಣವನ್ನು ಮಾಡಬೇಕಾದ ಅವಶ್ಯಕತೆ ಭವಿಷ್ಯದಲ್ಲಿ ಬಂದರೂ ಬರಬಹುದು.

ನಾನು ಗಾದೆಗಳನ್ನು ಕೇವಲ ಸಂಗ್ರಹ ಮಾಡಿಲ್ಲ. ಅವುಗಳನ್ನು ವಿಷಯವಾರು ವರ್ಗೀಕರಿಸಿ, ಅವುಗಳ ಅರ್ಥವನ್ನೂ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಆದರೆ ಒಂದು ಸಂಗತಿಯನ್ನಿಲ್ಲಿ ಹೇಳಲೇಬೇಕಾಗಿದೆ. ಗಾದೆಗಳ ಅರ್ಥವನ್ನು ಬಿಡಿಸಿ ಹೇಳಬೇಕಾದ ಪ್ರಮೇಯ ಬರುವುದಿಲ್ಲ. ಕಾರಣ ಗಾದೆಗಳ ಅರ್ಥ ಸರಳವಾಗಿದೆ. ಗಾದೆಗಳನ್ನು ಕೇಳಿದ ತಕ್ಷಣ ಎಂಥ ಅವಿದ್ಯಾವಂತನಾದರೂ ಅದರ ಅರ್ಥವನ್ನು ಗ್ರಹಿಸಬಲ್ಲ ಮತ್ತು ಬೇರೆಯವರಿಗೆ ಅದರ ಅರ್ಥವನ್ನು ವಿವರಿಸಬಲ್ಲ. ಗಾದೆಗಳ ಮತ್ತೊಂದು ವೈಶಿಷ್ಟ್ಯವೆಂದರೆ ಅವುಗಳ ಧ್ವನಿಸ್ವರೂಪ. ಗಾದೆಗಳು ಅನೇಕ ಅರ್ಥಗಳನ್ನು ಧ್ವನಿಸುತ್ತವೆ. ಅಂದರೆ ಒಂದು ಗಾದೆಯ ಅರ್ಥವನ್ನು ವಿವರಿಸಲು

ಪುಟಗಟ್ಟಲೆ ಬರೆಯಬಹುದು. ಅದರ ಹುಟ್ಟಿನ ಹಿನ್ನೆಲೆಯಲ್ಲಿ ಅನೇಕ ಘಟನೆಗಳು ನಡೆದಿರುತ್ತವೆ. ಐತಿಹಾಸಿಕ ಘಟನೆಗಳೂ ಕಾರಣವಾಗಿರಬಹುದು. ಪುರಾಣಗಳಿಂದಲೂ ಕೆಲವು ಗಾದೆಗಳು ಸೃಷ್ಟಿಯಾಗಿವೆ. ಆದ್ದರಿಂದಲೇ ಗಾದೆಗಳ ಅರ್ಥ ಎಷ್ಟು ಸರಳವೋ, ಕೆಲವು ಗಾದೆಗಳ ಅರ್ಥ ಅಷ್ಟೇ ಸಂಕೀರ್ಣವೂ ಹೌದು. ಒಟ್ಟಿನಲ್ಲಿ ಗಾದೆಗಳ ಸಂಗ್ರಹ ಕಾರ್ಯವು ಜನಪದ ಸಾಹಿತ್ಯದ ಋಣವನ್ನು ತೀರಿಸುವ ಒಂದು ವಿಧಾನವಾಗಿದೆ.

## ೧. ಬೇಸಾಯಕ್ಕೆ ಸಂಬಂಧಿಸಿದ ಗಾದೆಗಳು

### 1. "ಭರಣಿ ಮಳೆಗೆ ಬಿತ್ತಿದರೆ ಧರಣಿಯಲ್ಲಿ ಧಾನ್ಯ"

ಇದರ ಅರ್ಥವೇನೆಂದರೆ – ಭರಣಿ ಮಳೆ ಬಂದಾಗ ಬಿತ್ತನೆ ಮಾಡಿದರೆ ಫಸಲು ಗ್ಯಾರಂಟಿ ಬರುವುದು ಎಂಬುದು ರೈತರ ನಂಬಿಕೆ. ಅಂದರೆ ಇಲ್ಲಿ ರೈತನು ಭರಣಿ ಮಳೆ ಬರುವುದನ್ನೇ ಕಾಯುತ್ತ, ಬಂದ ಕೂಡಲೆ ಮುಂಗಾರು ಮಳೆಗೆ ಬೀಜ ಬಿತ್ತಲು ಸಿದ್ಧತೆ ಮಾಡಿಕೊಂಡಿರಬೇಕಾಗುತ್ತದೆ. ಈ ಗಾದೆ ಅವನಿಗೆ ಈ ಮುನ್ನೆಚ್ಚರಿಕೆಯನ್ನು ಕೊಟ್ಟಿರುತ್ತದೆ.

### 2. "ಆರಿದ್ರೆ ಮಳೆ ಗುಡುಗಿದರೆ ಆರು ಮಳೆ ಬರುವುದಿಲ್ಲ'

ಈ ಗಾದೆಯು ಕೂಡ ರೈತನ ಒಂದು ನಂಬಿಕೆಯಾಗಿದೆ. ಈ ಮಳೆ ಗುಡುಗಿದರೆ ರೈತ ಕಂಗಾಲಾಗುತ್ತಾನೆ. ಬರಗಾಲ ಬರುತ್ತದೇನೋ ಎಂದು ಗಾಬರಿಯಾಗುತ್ತಾನೆ. ಈ ಮಳೆ ಗುಡುಗದಿರಲಿ ಎಂದು ಹಾರೈಸುತ್ತಾನೆ. ಏಕೆಂದರೆ ಮಳೆಯನ್ನೇ ಅವಲಂಬಿಸಿರುವ ರೈತರಿಗೆ ಮಳೆ ಮತ್ತು ಮಳೆಯಿಂದ ಬೆಳೆಯುವ ಧಾನ್ಯಗಳೇ ಜೀವನಾಧಾರಗಳಾಗಿವೆ.

### 3. "ಉತ್ತರೆ ಮಳೆ ರೈತರಿಗೆ ಭಾಷೆ ಕೊಟ್ಟಿದೆ"

ಯಾವ ಮಳೆ ಬರದಿದ್ದರೂ ಉತ್ತರೆ ಮಳೆ ಬಂದೇ ಬರುತ್ತದೆಂಬುದು ರೈತರ ನಂಬಿಕೆ. ಆದ್ದರಿಂದ ರೈತ ಉತ್ತರೆ ಮಳೆಯನ್ನು ತನ್ನ ಆಪತ್ಬಾಂಧವನೆಂದು ಪರಿಗಣಿಸುತ್ತಾನೆ.

### 4. "ಹಸ್ತದ ಮಳೆ ಬಂದರೆ ಭೂಮಿಯೇ ಆಪ್ತವಾಗುತ್ತದೆ"

ಈ ಗಾದೆಯು ಹಸ್ತ ಮಳೆಯ ಸ್ವರೂಪವನ್ನು ತಿಳಿಸುತ್ತದೆ. ಹಸ್ತದ ಮಳೆ

ಧಾರಕಾರವಾಗಿ ಸುರಿಯುವುದರಿಂದ ಭೂಮಿ ಕಾಣದಂತೆ ನೀರಿನಿಂದ ತುಂಬಿ ಹೋಗುತ್ತದೆ. ಎಲ್ಲೆಲ್ಲೂ ನೀರೇ ನೀರು. ಇದು ಈ ಮಳೆಯ ವೈಭವವಾಗಿದೆ.

**4. "ಹದ ಬಂದಾಗ ಬಿತ್ತನೆ ಮಾಡು"**

ಈ ಗಾದೆಯಲ್ಲಿ ಸಮಯಕ್ಕೆ ಸರಿಯಾಗಿ ಬಿತ್ತನೆ ಮಾಡಬೇಕೆಂದು ಸೂಚಿಸಲಾಗಿದೆ. ಮಳೆ ಬಂದಾಗ, ಭೂಮಿಯಲ್ಲಿ ತೇವಾಂಶ ಕಡಿಮೆಯಾಗುವ ಮೊದಲು, ಬೀಜ ಮೊಳೆಯಲು ಸಾಕಷ್ಟು ತೇವಾಂಶವಿರುವಾಗ ಬೀಜವನ್ನು ಬಿತ್ತನೆ ಮಾಡಬೇಕೆಂಬುದು ಈ ಗಾದೆಯ ಆಶಯವಾಗಿದೆ. ಏಕೆಂದರೆ ಹದ ಆರಿಹೋದ ಒಣ ಭೂಮಿಗೆ ಬೀಜ ಬಿತ್ತಿದರೆ ಅದು ಮೊಳೆಯೊಡೆಯುವುದೇ ಇಲ್ಲ. ಬೀಜ ನಷ್ಟವಾಗುವುದು ಗ್ಯಾರಂಟಿ. ಮಳೆ ಬಂದ ಸಮಯದಲ್ಲಿ ರೈತ ಸೋಮಾರಿಯಾಗಿ ಕುಳಿತು, ಯಾವಾಗಲೋ ಬಿತ್ತನೆ ಮಾಡಿದರೆ ಏನು ಪ್ರಯೋಜನ ಎಂಬ ಎಚ್ಚರಿಕೆಯನ್ನು ಕೊಡುತ್ತದೆ ಈ ಗಾದೆ.

**6. "ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆ ಮೇಲು"**

ಈ ಗಾದೆಯಲ್ಲಿ ವ್ಯವಸಾಯದ ಪ್ರಾಮುಖ್ಯತೆಯನ್ನು ತಿಳಿಸಿದೆ. ಮೇಟಿ ವಿದ್ಯೆ ಅಂದರೆ ಬೇಸಾಯ ಮನುಷ್ಯನ ಜೀವನಾಧಾರವಾದ ಕಸುಬಾಗಿದೆ. ರೈತ ಬೆಳೆಯದಿದ್ದರೆ ಸಮಾಜದ ಇತರೆ ಕಸುಬು ಮಾಡುವ ಜನರೂ ಉಪವಾಸ ಸಾಯಬೇಕಾಗುತ್ತದೆ. ದುಡ್ಡು ತಿನ್ನಲು ಬರುವುದಿಲ್ಲ. ದುಡ್ಡಿಗೆ ಕೊಳ್ಳುವ ಶಕ್ತಿ ಇರುವುದಾದರೂ ಕೊಳ್ಳಲು ಧಾನ್ಯವೇ ಇಲ್ಲದಿದ್ದರೆ ಗತಿಯೇನು ? ಹಾಗಾಗಿಯೇ ಇಲ್ಲಿ ಬೇಸಾಯದ ಮಹತ್ವವನ್ನು ಒತ್ತಿ ಹೇಳಿದೆ. 'ಮೇಟಿ ವಿದ್ಯೆ' ಇಲ್ಲಿರುವ 'ಮೇಟಿ' ಎಂಬ ಪದದ ಅರ್ಥ ಹುಲ್ಲು ತುಳಿಸುವ ಕಣದಲ್ಲಿರುವ 'ಮೇಟಿ' ಎಂದು. ಮೇಟಿಯನ್ನು ಕಣದ ಮಧ್ಯಭಾಗದಲ್ಲಿ ನೆಟ್ಟಿರುತ್ತಾರೆ. ಮೇಟಿಯ ಸುತ್ತಲೂ ಹಗ್ಗದಿಂದ ಕಟ್ಟಿರುವ ದನಗಳನ್ನು ತಿರುಗಿಸುತ್ತಾರೆ. ಈ ರೀತಿ ದನಗಳ ಕಾಲ್ತುಳಿತಕ್ಕೆ ಸಿಕ್ಕಿದ ರಾಗಿ ತೆನೆಯಲ್ಲಿನ ರಾಗಿ ತೆನೆಯಿಂದ ಪ್ರತ್ಯೇಕಗೊಳ್ಳುತ್ತದೆ. ರಾಗಿ ತುಳಿಸುವ ಈ ದೃಶ್ಯವನ್ನು ರೈತರು ಸುಗ್ಗಿ ಕಾಲದಲ್ಲಿ ಕಣಗಳಲ್ಲಿ ಕೆಲಸ ಮಾಡುವಾಗ ಕಾಣಬಹುದು. ಹಾಗಾಗಿ ಮೇಟಿ ವಿದ್ಯೆ ಎಂದರೆ ಬೇಸಾಯ ಎಂದು ಅರ್ಥಮಾಡಿಕೊಳ್ಳಬೇಕು.

**7. ಅ) "ಆರಂಭ ಕೆಟ್ಟರೂ ಅರ್ಧ ಬೆಳೆ"**

**ಆ) "ಆರಂಭ ಕೆಟ್ಟರೂ ಆರು ತಿಂಗಳ ಅಂಬಲಿ"**

ಈ ಗಾದೆಗಳು ರೈತರಿಗೆ ಭರವಸೆ ಕೊಡುತ್ತವೆ. ಅಂದರೆ ಸರಿಯಾಗಿ ಮಳೆಯಾಗದೆ ಪೈರು ಒಣಗಿ ಹೋಗಿ, ಬೆಳೆ ನಷ್ಟವಾದರೂ ರೈತನು ಯಾವತ್ತೂ ಉಪವಾಸ ಸಾಯಲಾರ. ಏಕೆಂದರೆ ಅವನು ಭೂಮಿ ತಾಯಿಯನ್ನು ನಂಬಿರುತ್ತಾನೆ. ನಂಬಿದ ಭೂತಾಯಿ ರೈತನನ್ನು ಎಂದೂ ಕೈಬಿಡುವುದಿಲ್ಲ. ಕಷ್ಟಪಟ್ಟು ಬೆಳೆಯುವ ರೈತನಿಗೆ ಅರ್ಧ ಬೆಳೆಯನ್ನಾದರೂ ಕೊಟ್ಟು ಕಾಪಾಡುತ್ತದೆ. ಮಾರಾಟ ಮಾಡುವಷ್ಟು ಬೆಳೆಯಾಗದಿದ್ದರೂ, ಹೊಟ್ಟೆಪಾಡಿಗೆ ಸಾಕಾಗುವಷ್ಟು ಧಾನ್ಯವನ್ನಾದರೂ ಭೂಮಿ ತಾಯಿ ಕೊಟ್ಟೇ ಕೊಡುತ್ತಾಳೆ ಎಂಬುದು ರೈತನ ಅಚಲ ನಂಬಿಕೆ. ಬೇಸಾಯ ಬಿಡಬೇಡ ಎಂದು ಬುದ್ಧಿವಾದ ಹೇಳುತ್ತದೆ. "ನಾನಿದ್ದೇನೆ ಧೈರ್ಯವಾಗಿರು" ಎಂದು ಧೈರ್ಯ ತುಂಬುತ್ತದೆ. ಒಟ್ಟಿನಲ್ಲಿ ಎಲ್ಲರಿಗೆ ಅನ್ನ ಕೊಡುವ ರೈತ ಉಪವಾಸ ಸಾಯಬಾರದು. ಅವನು ಎಲ್ಲರಂತೆ ಸುಖ-ಸಮೃದ್ಧಿಯಿಂದ ಜೀವಿಸಬೇಕು. ರೈತನ ಅಭಿವೃದ್ಧಿಯೇ ದೇಶದ ಅಭಿವೃದ್ಧಿ. ರೈತ ಉದ್ಧಾರವಾದರೆ ದೇಶ ಉದ್ಧಾರವಾದ ಹಾಗೆ. ಆರಂಭ ಕೆಡುವುದು ಬೇಡ. ಅರ್ಧ ಬೆಳೆಯೇಕೆ ? ರೈತ ಪೂರ್ತಿ ಬೆಳೆಯನ್ನೇ ಬೆಳೆಯಲಿ. ಅವನ ಬದುಕು ಬಂಗಾರವಾಗಲಿ ಎಂಬುದೇ ಎಲ್ಲರ ಹಾರೈಕೆ.

**8. "ಬೇಸಾಯ ಮನೆ ಮಕ್ಕಳೆಲ್ಲ ಸಾಯ"**

ಈ ಗಾದೆ ಬೇಸಾಯದ ಕೆಲಸ ಎಷ್ಟು ಕಷ್ಟಕರವಾದ ಕೆಲಸ ಎಂಬುದನ್ನು ತಿಳಿಸುತ್ತದೆ. ಬೆಳಿಗ್ಗೆ ಎದ್ದಾಗಿನಿಂದ, ರಾತ್ರಿ ಮಲಗುವವರೆಗೆ ರೈತ ಒಂದಿಲ್ಲ ಒಂದು ಕೆಲಸದಲ್ಲಿ ತೊಡಗಿರುತ್ತಾನೆ. ಬೆಳಿಗ್ಗೆ ಬೇಸಾಯ ಹೂಡಿಕೊಂಡು ಹೋಗುವುದು. ಮಧ್ಯಾಹ್ನ ದನಗಳನ್ನು ಮೇಯಿಸುವುದಕ್ಕೆ ಹೋಗುವುದು. ದಿನವೆಲ್ಲ ಹೊಲ-ಗದ್ದೆ-ತೋಟಗಳಲ್ಲಿ ಕೆಲಸ ಮಾಡುವುದು. ರಾತ್ರಿ ದನಗಳಿಗೆ ಹುಲ್ಲು ಹಾಕುವುದು, ಕೊಟ್ಟಿಗೆಗೆ ದನಗಳನ್ನು ಕಟ್ಟುವುದು. ಧಾನ್ಯಗಳನ್ನು ಚೀಲಗಳಲ್ಲಿ ತುಂಬಿಡುವುದು ಮುಂತಾದ ಅನೇಕ ಕೆಲಸಗಳನ್ನು ರೈತನು ಮಾಡುತ್ತಲೇ ಇರುತ್ತಾನೆ. ಹಾಗಾಗಿ "ಮನೆ ಮಕ್ಕಳೆಲ್ಲ ಸಾಯ" ಎಂದರೆ ಮನೆ ಮಕ್ಕಳೆಲ್ಲ ಕಷ್ಟಪಟ್ಟು ಕೆಲಸ ಮಾಡಬೇಕು ಎನ್ನುವುದೇ ಇದರ ಅರ್ಥ.

### 9. "ಮಳೆ ಬಂದರೆ ನಷ್ಟವೇ ? ಮಕ್ಕಳಾದರೆ ನಷ್ಟವೇ ?"

ಈ ಗಾದೆಯಲ್ಲಿ ಮಳೆ ಮತ್ತು ಮಕ್ಕಳ ಮಹತ್ವವನ್ನು ಹೇಳಿದೆ. ಮಳೆ ಬಂದರೆ ರೈತನಿಗೆ ಎಂದೂ ಕೇಡಿಲ್ಲ. ಮಳೆಯಾದರೆ ರೈತ ಸಾಕಷ್ಟು ದವಸ ಧಾನ್ಯ ಬೆಳೆದು ಸುಖವಾಗಿರುತ್ತಾನೆ. ಹಾಗೆಯೇ ದೇಶವೂ ಸುಭಿಕ್ಷವಾಗಿರುತ್ತದೆ. ಅದೇ ರೀತಿ "ಮಕ್ಕಳಾದರೆ ನಷ್ಟವೆ ?" ಎನ್ನುವುದು ರೈತನ ಪ್ರಶ್ನೆ. ರೈತನ ಮನೆಯಲ್ಲಿ ಮಕ್ಕಳಿದ್ದಷ್ಟೂ ಅನುಕೂಲವೇ ಜಾಸ್ತಿ. ಬೇಸಾಯದ ಕೆಲಸಕ್ಕೆ ಎಷ್ಟು ಜನರಿದ್ದರೂ ಕಡಿಮೆಯೇ. ಕೈನೆರೆಗೆ ಬಂದ ಮಕ್ಕಳು ದನ ಕಾಯುವುದಕ್ಕೆ ಮತ್ತು ಇತರೆ ವ್ಯವಸಾಯದ ಸಣ್ಣಪುಟ್ಟ ಕೆಲಸಕ್ಕೆ ನೆರವಾಗುತ್ತಾರೆ. ಹಾಗಾಗಿ ರೈತ, ಮಕ್ಕಳನ್ನು ಭಾಗ್ಯವೆಂದೇ ತಿಳಿಯುತ್ತಾನೆ. ಗಂಡ–ಹೆಂಡತಿ–ಒಂದು ಮಗು ಇರುವ ಈ ಕಾಲದ ಕುಟುಂಬಗಳಿಗೆ ಬೇಸಾಯ ಮಾಡಲು ಹೇಗೆ ಸಾಧ್ಯ ? ಕೂಡು ಕುಟುಂಬಗಳೇ ಬೇಸಾಯಕ್ಕೆ ಅನುಕೂಲಕರ ವಾದುದೆಂಬುದು ರೈತನ ನಂಬಿಕೆ.

### 10. ದುಡಿಯಬೇಕಾದರೆ ನಾಲ್ಕು ಕಾಸು ಕೂಡಿಡಬೇಕು, ಹಡೆಯಬೇಕಾದರೆ ನಾಲ್ಕು ಮಕ್ಕಳು ಹಡೆಯಬೇಕು"

ಈ ಗಾದೆಯಲ್ಲಿ ಕಾಲದ ಮಹತ್ವವನ್ನು ಹೇಳಿದೆ. ದುಡಿಯುವ ಕಾಲದಲ್ಲಿ ಚೆನ್ನಾಗಿ ದುಡಿದು ಕೂಡಿಡಬೇಕು. ಹೀಗೆ ಕೂಡಿಟ್ಟ ಹಣ ಮುಪ್ಪಿನ ಕಾಲದಲ್ಲಿ ಅನುಕೂಲಕ್ಕೆ ಬರುತ್ತದೆ. ದುಡಿಯುವ ಸಾಮರ್ಥ್ಯ ಎಲ್ಲ ಕಾಲದಲ್ಲೂ ಒಂದೇ ಸಮನಾಗಿ ಇರುವುದಿಲ್ಲ. ಮುಪ್ಪಿನಲ್ಲಿ ದುಡಿಯುವ ಸಾಮರ್ಥ್ಯವಿರುವುದಿಲ್ಲ. ಆದ್ದರಿಂದಲೇ ಮೈಯಲ್ಲಿ ಶಕ್ತಿಯಿರುವಾಗಲೇ ಚೆನ್ನಾಗಿ ದುಡಿಯಬೇಕು ಎನ್ನುವುದು. ಈ ಗಾದೆಯ ಸಾರಾಂಶ. ಹಾಗೆಯೇ "ಹಡೆಯುವಾಗ ನಾಲ್ಕು ಮಕ್ಕಳನ್ನು ಹಡೆಯಬೇಕು" ಅಂದರೆ ಮಕ್ಕಾಗುವ ಕಾಲದಲ್ಲೇ ಮಕ್ಕಳನ್ನು ಪಡೆಯಬೇಕು. ಮುಪ್ಪಾದ ಕಾಲದಲ್ಲಿ ಮಕ್ಕಳನ್ನು ಪಡೆಯುವುದು, ಸಾಕುವುದು ಎಲ್ಲವೂ ಕಷ್ಟಕರವೇ. ಆದ್ದರಿಂದಲೇ ಯೌವನ ಇರುವಾಗ, ಮಕ್ಕಳನ್ನು ಸಾಕುವ ಯೋಗ್ಯತೆ ಇರುವಾಗಲೇ ಮಕ್ಕಳನ್ನು ಪಡೆಯಬೇಕು ಎನ್ನುವುದು ಇದರ ಅರ್ಥ. ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಪಡೆಯಬೇಕು ಎನ್ನುವುದು ರೈತನ ಆಸೆ. ಕಾರಣ ಹೆಚ್ಚು ಮಕ್ಕಳಿದ್ದಷ್ಟೂ ತನ್ನ ಬೇಸಾಯದ ಕೆಲಸಕ್ಕೆ ಮಕ್ಕಳು ಸಹಾಯಕವಾಗುತ್ತಾರೆಂಬುದೇ ಅವನ ನಂಬಿಕೆ.

**11. "ಆಳು ಮಾಡುವುದು ಹಾಳು ; ಮಗ ಮಾಡುವುದು ಮಧ್ಯಮ ; ತಾನು ಮಾಡುವುದು ಮೇಲು"**

ಈ ಗಾದೆಯಲ್ಲಿ ಸದಾ ಪರಾವಲಂಬಿಯಾಗಿರಬೇಡ ; ಸ್ವಾವಲಂಬಿಯಾಗಿ ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವುದನ್ನು ಕಲಿ ಎಂಬ ನೀತಿ ಅಡಗಿದೆ.

**12. "ಸಂಕ್ರಾಂತಿಗೆ ಶಂಕದ ದಪ್ಪ ಚಳಿ, ಶಿವರಾತ್ರಿಗೆ ಚಳಿ ಶಿವ ಶಿವಾ ಅಂತ ಹೋಯಿತು"**

ಈ ಗಾದೆ ರೈತನಿಗೆ ಋತುಗಳ ಮಹತ್ವವನ್ನು ತಿಳಿಸುತ್ತದೆ. ಸಂಕ್ರಾಂತಿ ಹಬ್ಬದ ಕಾಲದಲ್ಲಿ ಹೆಚ್ಚು ಚಳಿ ಇರುತ್ತದೆ. ಶಿವರಾತ್ರಿ ಹಬ್ಬದ ನಂತರ ಚಳಿ ಹೊರಟು ಹೋಗುತ್ತದೆ. ಹೀಗೆ ಹಬ್ಬಗಳೂ ಸಹ ರೈತನಿಗೆ ಚಳಿಗಾಲದ ಏರಿಳಿತಗಳನ್ನು ತಿಳಿಸುತ್ತವೆ. ಈ ಎರಡೂ ಹಬ್ಬಗಳು ಚಳಿಗಾಲದಲ್ಲಿ ಬರುತ್ತವೆ ಎಂಬುದು ತಿಳಿಯುತ್ತದೆ.

**13. "ಶಿವರಾತ್ರಿಗೆ ಸೀಳುಗಾಯಿ ; ಯುಗಾದಿಗೆ ಹುಳಿಗಾಯಿ"**

ಈ ಗಾದೆಯಲ್ಲಿ ಮಾವಿನ ಮರ ಫಸಲು ಬಿಡುವ ರೀತಿಯನ್ನು ತಿಳಿಸಿದೆ. ಶಿವರಾತ್ರಿ ಹಬ್ಬದ ಹೊತ್ತಿಗೆ ಮಾವಿನ ಕಾಯಿ ಸೀಳುಗಾಯಿ ಅಂದರೆ ಹೀಚುಗಾಯಿಗಳಾಗಿರುತ್ತವೆ. ಯುಗಾದಿ ಹಬ್ಬದ ಸಮಯಕ್ಕೆ ಹೂವಿನ ಕಾಯಿ "ಹುಳಿಗಾಯಿ" ಎಂದರೆ ಹುಳಿ ತುಂಬಿದ ಕಾಯಿಗಳಾಗಿರುತ್ತವೆ ಎಂಬುದು ಇದರ ಅರ್ಥ.

**15. "ಆರಂಭ ವರ್ಷ ವ್ಯಾಪಾರ ನಿಮಿಷ"**

ರೈತನಿಗೆ ತನ್ನ ಬೆಳೆ ಕೈ ಸೇರಬೇಕಾದರೆ ಒಂದು ವರ್ಷ ಬೇಕು. ಆದರೆ ವ್ಯಾಪಾರಿಗೆ ಚೆನ್ನಾಗಿ ವ್ಯಾಪಾರ ನಡೆದರೆ ಅಲ್ಪ ಕಾಲದಲ್ಲಿಯೇ ಹೆಚ್ಚು ಹಣ ಸಂಪಾದಿಸುತ್ತಾನೆ. ಇಲ್ಲಿ ವ್ಯಾಪಾರಿ ಹೇಗೆ ಬೇಗ ಹಣವಂತನಾಗಬಲ್ಲ ಎಂಬುದನ್ನು ಹೇಳಲಾಗಿದೆ.

## ೨. ಆರೋಗ್ಯಕ್ಕೆ ಸಂಬಂಧಿಸಿದ ಗಾದೆಗಳು

**1. "ಊಟ ಬಲ್ಲವನಿಗೆ ರೋಗವಿಲ್ಲ ; ಮಾತು ಬಲ್ಲವನಿಗೆ ಜಗಳವಿಲ್ಲ"**

ಈ ಗಾದೆ ಆರೋಗ್ಯದ ಮಹತ್ವವನ್ನು ಹೇಳಿದೆ. ಊಟವನ್ನು ಎಷ್ಟು ಪ್ರಮಾಣದಲ್ಲಿ ಮಾಡಬೇಕು, ಯಾವ ಸಮಯದಲ್ಲಿ ಮಾಡಬೇಕು, ಹೇಗೆ

ಮಾಡಬೇಕು ಎಂಬ ತಿಳುವಳಿಕೆ ಇದ್ದವನಿಗೆ ರೋಗ ಬರುವುದಿಲ್ಲವೆಂಬುದು ಇದರ ಅಂತರಾರ್ಥ. ಇದೇ ರೀತಿ 'ಮಾತನ್ನು ಹೇಗೆ ಆಡಬೇಕು' ಎಂದು ಗೊತ್ತಿರುವವನಿಗೆ ಜಗಳ ಮಾಡುವ ಪ್ರಮೇಯವೂ ಬರುವುದಿಲ್ಲ ಎಂದು ಈ ಗಾದೆ ಮಾತಿನ ಮಹತ್ವವನ್ನು ತಿಳಿಸುತ್ತದೆ.

**೨. "ಒಂದು ಹೊತ್ತು ಉಂಡವನು ಯೋಗಿ ; ಎರಡು ಹೊತ್ತು ಉಂಡವನು ಭೋಗಿ ; ಮೂರು ಹೊತ್ತು ಉಂಡವನು ರೋಗಿ ; ನಾಲ್ಕು ಹೊತ್ತು ಉಂಡವನನ್ನು ಹೊತ್ತುಕೊಂಡು ಹೋಗಿ"**

ಈ ಗಾದೆ ಆರೋಗ್ಯಕ್ಕೂ ಊಟಕ್ಕೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಯೋಗಿಯಾದವನು ದಿನಕ್ಕೆ ಒಂದು ಹೊತ್ತು ಊಟ ಮಾಡಬೇಕು. ಭೋಗಿಯಾದವನು ಎರಡು ಹೊತ್ತು ಊಟ ಮಾಡಬಹುದು, ದಿನಕ್ಕೆ ಮೂರು ಹೊತ್ತು ಊಟ ಮಾಡುವುದರಿಂದ ಮನುಷ್ಯನು ರೋಗ ಪೀಡಿತನಾಗುತ್ತಾನೆ. ದಿನಕ್ಕೆ ನಾಲ್ಕು ಹೊತ್ತು ಊಟ ಮಾಡಿವವನು ಸಾವಿನ ಹಾದಿ ಹಿಡಿದಂತೆಯೇ ಸರಿ.

**3. "ರಾಗಿ ತಿಂದವನಿಗೆ ರೋಗವಿಲ್ಲ, ಜೋಳ ತಿಂದವನು ತೋಳನಂತಾಗುತ್ತಾನೆ. ಅಕ್ಕಿ ತಿಂದವನು ಹಕ್ಕಿಯಂತಾಗುತ್ತಾನೆ"**

ಈ ಗಾದೆ ಆರೋಗ್ಯದ ವಿಚಾರದಲ್ಲಿ ಧಾನ್ಯಗಳ ಮಹತ್ವವನ್ನು ಹೇಳಿದೆ. ರಾಗಿ ಅತ್ಯುತ್ತಮ ಧಾನ್ಯ ಏಕೆಂದರೆ ಇದನ್ನು ತಿನ್ನುವುದರಿಂದ ಯಾವ ರೋಗವೂ ಬರುವುದಿಲ್ಲ. ಎರಡನೆಯ ಆಹಾರ ಜೋಳ. ಇದನ್ನು ತಿನ್ನುವವನು ತೋಳದಂತೆ ಶಕ್ತಿಶಾಲಿಯಾಗುತ್ತಾನೆ. ಮೂರನೆಯ ಆಹಾರ ನಾವು ದಿನನಿತ್ಯ ಬಳಸುತ್ತಿರುವ ಅಕ್ಕಿಯಲ್ಲಿ ಮಾಡಿದ ಅನ್ನ. ಇದು ರೋಗ ಮೂಲವೆಂದು ತಿಳಿದರೂ ನಾವು ಇದನ್ನು ಹೆಚ್ಚು ಹೆಚ್ಚು ಬಳಸುತ್ತೇವೆ. ಅಕ್ಕಿಯನ್ನು ತಿಂದವನು ಹಕ್ಕಿಯಂತಾಗುತ್ತಾನೆ ಅಂದರೆ ಹಕ್ಕಿಯಂತೆ ನಿಶ್ಶಕ್ತನಾಗುತ್ತಾನೆ ಎಂಬುದು ಈ ಗಾದೆಯ ವಿವರಣೆ.

**4. "ಹಸಿದು ಹಲಸಿನ ಹಣ್ಣು ತಿನ್ನು ; ಉಂಡು ಮಾವಿನಹಣ್ಣು ತಿನ್ನು"**

ಈ ಗಾದೆಯ ಪ್ರಕಾರ ಹಲಸಿನ ಹಣ್ಣು ಸುಲಭವಾಗಿ ಜೀರ್ಣವಾಗುವುದಿಲ್ಲ. ಆದ್ದರಿಂದ ಇದನ್ನು ಊಟಕ್ಕೆ ಮುಂಚೆಯೇ ತಿನ್ನಬೇಕು. ಇದೇ ರೀತಿ ಮಾವಿನಹಣ್ಣು ಸುಲಭವಾಗಿ ಜೀರ್ಣವಾಗುವ ಹಣ್ಣು. ಆದ್ದರಿಂದ ಊಟವಾದ

ನಂತರ ತಿಂದರೆ ಊಟದಲ್ಲಿ ಏನಾದರೂ ಕೊರತೆ ಇದ್ದರೆ ಅದನ್ನು ಈ ಹಣ್ಣು ತುಂಬಿಕೊಡುತ್ತದೆ.

## ೩. ದಾಂಪತ್ಯ ಕುರಿತ ಗಾದೆಗಳು

**1. "ಹೆಣ್ಣು ಸಂಸಾರದ ಕಣ್ಣು"**

ಈ ಗಾದೆಯಲ್ಲಿ ಸಂಸಾರದಲ್ಲಿ ಹೆಣ್ಣಿನ ಮಹತ್ವವನ್ನು ಹೇಳಿದೆ. ಹೆಣ್ಣಿಲ್ಲದ ಮೇಲೆ ಅದು ಸಂಸಾರವೇ ಅಲ್ಲ. ಮನುಷ್ಯನ ದೇಹಕ್ಕೆ ಕಣ್ಣು ಎಷ್ಟು ಮುಖ್ಯವೋ, ಸಂಸಾರಕ್ಕೆ ಹೆಣ್ಣು ಅಷ್ಟೇ ಮುಖ್ಯ ಎಂಬುದು ಈ ಗಾದೆಯ ಹೇಳಿಕೆ.

**2. "ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ"**

ಈ ಗಾದೆಯಲ್ಲಿ ಗಂಡು ಹೆಣ್ಣಿನ ಸಂಬಂಧ ಬಿಡಿಸಲಾಗದ ಬಂಧ ಎಂಬುದನ್ನು ಹೇಳಿದೆ. ಗಂಡ–ಹೆಂಡತಿ ಎಷ್ಟೇ ಜಗಳವಾಡಿದರೂ ಕಡೆಯಲ್ಲಿ ಪರಸ್ಪರ ಹೊಂದಿಕೊಂಡು ಹೋಗಬೇಕು. ಗಂಡ–ಹೆಂಡಿರ ನಡುವಿನ ಜಗಳ ತಾತ್ಕಾಲಿಕ ಸ್ವರೂಪದ್ದಾಗಿರಬೇಕು. ಅವರಿಬ್ಬರೂ ಒಟ್ಟಿಗೆ ಬಾಳುವುದು ಅನಿವಾರ್ಯ. ಅವರು ವಿವಾಹವೆಂಬ ಪವಿತ್ರ ಬಂಧನದಲ್ಲಿ ಬಂಧಿತರಾಗಿದ್ದಾರೆ. ಹಾಗಾಗಿಯೇ ಅವರು ಎಷ್ಟೇ ಜಗಳವಾಡಿದರೂ ಕಡೆಯಲ್ಲಿ ಪರಸ್ಪರ ಪ್ರೀತಿ–ವಿಶ್ವಾಸಗಳಿಂದ ಬಾಳಬೇಕು ಎಂಬುದು ಈ ಗಾದೆಯ ಆಶಯ. ಇಲ್ಲಿ ಗಂಡ–ಹೆಂಡತಿ ನಡುವೆ ನಂಬಿಕೆ ಇರಬೇಕಾದ್ದು ಬಹಳ ಮುಖ್ಯವಾದದ್ದು. ನಂಬಿಕೆ ಇಲ್ಲದ ಮೇಲೆ ಆ ಸಂಸಾರಕ್ಕೆ ಅರ್ಥವೇ ಇರುವುದಿಲ್ಲ. ಗಂಡ–ಹೆಂಡಿರಿಬ್ಬರೂ ತಮ್ಮ ಕೆಲವು ಸ್ವಾತಂತ್ರ್ಯಗಳನ್ನು ಬಿಟ್ಟು ಕೊಡುವುದು ಮತ್ತು ಗಂಡ ಹೆಂಡತಿಯ ಮತ್ತು ಹೆಂಡತಿ ಗಂಡನ ಸ್ವಾತಂತ್ರ್ಯವನ್ನು ಗೌರವಿಸುವುದು ಸಂಸಾರದಲ್ಲಿ ಅವಶ್ಯಕವಾಗಿದೆ. ಹಾಗೆಯೇ ಗಂಡನ ಒಳ್ಳೆಯ ಗುಣಗಳನ್ನು ಹೆಂಡತಿ ಹೊಗಳುವುದು, ಮತ್ತು ಹೆಂಡತಿಯ ಒಳ್ಳೆಯ ಗುಣಗಳನ್ನು ಗಂಡ ಹೊಗಳುವುದು ಪರಸ್ಪರರ ಸಂಬಂಧವನ್ನು ಗಟ್ಟಿಗೊಳಿಸುತ್ತದೆ.

**3. "ಇಟ್ಟುಕೊಂಡವಳು ಇರೋ ತನಕ, ಕಟ್ಟಿಕೊಂಡವಳು ಕಡೇ ತನಕ"**

ಈ ಗಾದೆಯಲ್ಲಿ ಗಂಡ–ಹೆಂಡಿರ ಸಂಬಂಧ ಶಾಶ್ವತವಾದದ್ದೆಂದೂ, ವಿವಾಹ ಬಾಹಿರ ಸಂಬಂಧ ತಾತ್ಕಾಲಿಕವಾದದ್ದೆಂದೂ ಹೇಳಲಾಗಿದೆ. ಗಂಡ–ಹೆಂಡಿರ ಸಂಬಂಧಕ್ಕೆ ಸಮಾಜದ ಒಪ್ಪಿಗೆಯಿದೆ. ವಿವಾಹ ಬಾಹಿರ ಸಂಬಂಧಕ್ಕೆ ಸಮಾಜದ

ಒಪ್ಪಿಗೆ ಇರುವುದಿಲ್ಲ. ವಿವಾಹವಿಲ್ಲದೆ ಒಟ್ಟಿಗೆ ಬಾಳುವುದು ಪರಸ್ಪರ ನಂಬಿಕೆ ಇರುವವರೆಗೆ ಮಾತ್ರ ಇರುತ್ತದೆ. ಯಾವಾಗ ಇಬ್ಬರ ಮಧ್ಯೆ ಅಪನಂಬಿಕೆ ಬೆಳೆಯುತ್ತದೋ ಆಗ ಆ ಸಂಬಂಧ ಮುರಿದು ಬೀಳುತ್ತದೆ. ವಿವಾಹದಲ್ಲಿ ಒಂದಾದ ದಂಪತಿಗಳಲ್ಲೂ ವಿರಸ ಉಂಟಾಗುತ್ತದೆ. ಆದರೆ ಸಮಾಜದ ಹಿರಿಯರು, ಹಿತೈಷಿಗಳು ಅವರಿಬ್ಬರೂ ಹೊಂದಿಕೊಂಡು ಹೋಗಬೇಕೆಂದೇ ಬುದ್ಧಿವಾದ ಹೇಳುತ್ತಾರೆ. ಇಡೀ ಸಮಾಜ ಅವರು ಬೇರ್ಪಡುವುದನ್ನು ನಿರಾಕರಿಸುತ್ತದೆ ಹಾಗೂ ಒಂದು ವೇಳೆ ಅವರು ಬೇರ್ಪಟ್ಟರೆ ಅವರನ್ನು ಸಮಾಜದ ಜನ ಗೌರವದಿಂದ ಕಾಣುವುದಿಲ್ಲ. ಈ ಎಲ್ಲ ಕಾರಣದಂದ ವಿವಾಹಿತರ ಸಂಬಂಧ ಹೆಚ್ಚು ಗಟ್ಟಿಯಾಗುತ್ತದೆ ಹೇಳಬಹುದು.

**4. "ಹೆತ್ತವರಿಗೆ ಹೆಗ್ಗಣ ಮುದ್ದು, ಕೂಡಿದವರಿಗೆ ಕೋಡಗ ಮುದ್ದು"**

ಈ ಗಾದೆಯಲ್ಲಿ ಪ್ರೀತಿಯ ಮಹತ್ವವನ್ನು ಹೇಳಿದೆ. ಪ್ರೀತಿಸುವ ಗಂಡು-ಹೆಂಡಿರ ಮಧ್ಯೆ ರೂಪ ಅಡ್ಡ ಬರುವುದಿಲ್ಲ. ಹೆಂಡತಿ ಕುರೂಪಿಯಾಗಿದ್ದರೂ ಸಹ ಪ್ರೀತಿಸುವ ಗಂಡನ ಪಾಲಿಗೆ ಅವಳು ರತಿಯೇ ಸೈ. ಬೇರೆಯವರ ದೃಷ್ಟಿಯಲ್ಲಿ ಅವಳು ಕೋಡಗದಂತೆ ಕಾಣುತ್ತಿದ್ದರೂ ಪ್ರೀತಿಸುವ ಗಂಡನ ಪಾಲಿಗೆ ಅವಳು ಸುರಸುಂದರಿಯಾಗಿಯೇ ಕಾಣುತ್ತಾಳೆ. ಪ್ರೀತಿಯ ಮಹತ್ವವೇ ಅಂಥದು. ಇದೇ ರೀತಿ ಹೆತ್ತವರಿಗೆ ತಮ್ಮ ಮಕ್ಕಳು ಕುರೂಪಿಗಳಾಗಿದ್ದರೂ ಅವರಿಗೆ ಸುಂದರವಾಗಿಯೇ ಕಾಣುತ್ತಿರುತ್ತಾರೆ. ಕಾರಣ ತಮ್ಮ ಮಕ್ಕಳ ಮೇಲೆ ಪಾಲಕರಿಗೆ ಇರುವ ಅತಿಯಾದ ಮಮತೆ ಮತ್ತು ಪ್ರೀತಿ.

**5. "ತನ್ನ ಮನೆ ಹೆಂಡತಿ ಕುರುಡಿ"**

ಈ ಗಾದೆಯಲ್ಲಿ ಗಂಡಿನ ಚಂಚಲತೆಯನ್ನು ಹೇಳಿದೆ. ಚಂಚಲ ಸ್ವಭಾವದ ಗಂಡಿಗೆ ತನ್ನ ಹೆಂಡತಿ ಎಷ್ಟೇ ಸುಂದರಿಯಾಗಿದ್ದರೂ ಬೇರೊಬ್ಬರ ಪತ್ನಿ ಹೆಚ್ಚು ಸುಂದರಿಯಾಗಿ ಕಾಣುತ್ತಾಳೆ. ಕಾರಣ ತನ್ನ ಹೆಂಡತಿಯನ್ನೇ ನೋಡಿ ನೋಡಿ ಚಂಚಲ ಮನಸ್ಕನಾದ ಅವನು ತನ್ನ ಹೆಂಡತಿಯ ಮೇಲಿನ ಆಕರ್ಷಣೆಯನ್ನು ಕಳೆದುಕೊಂಡಿರುತ್ತಾನೆ. ಹಾಗಾಗಿಯೇ ಆ ಚಂಚಲ ಮನುಷ್ಯ ದುಂಬಿಯು ಹೂವಿನಿಂದ ಹೂವಿಗೆ ಹಾರುವ ಹಾಗೆ ಬೇರೆ ಬೇರೆ ಹೆಣ್ಣುಗಳನ್ನು ನೋಡಿ ಜೊಲ್ಲು ಸುರಿಸುತ್ತಿರುತ್ತಾನೆ. ತನ್ನ ಹೆಂಡತಿ ಸುಂದರಿಯಾಗಿದ್ದರೂ

ಅವನ ಪಾಲಿಗೆ ಅವಳು ಕುರುಡಿಯಂತೆ ಕಾಣುತ್ತಾಳೆ. ಹೀಗಾಗಿ ಈ ಗಾದೆ ಅಂಥ ಚಂಚಲ ಮನಸ್ಸಿನ ಗಂಡಂದಿರನ್ನು ವಿಡಂಬನೆ ಮಾಡುತ್ತದೆ.

**6. "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿತಂತೆ"**

ಈ ಗಾದೆಯಲ್ಲಿ ಸಹ ಹೆಂಡತಿಯ ಮೇಲೆ ಪ್ರೀತಿಯಿಲ್ಲದ ಗಂಡನ ವರ್ತನೆಯನ್ನು ತಿಳಿಸುತ್ತದೆ. ಮೊಸರಲ್ಲಿ ಕಲ್ಲು ಇರುವುದಿಲ್ಲ. ಆದರೂ ಕಲ್ಲು ಸಿಕ್ಕಿತು ಎಂದು ಹೇಳಬೇಕಾದರೆ, ಗಂಡನಿಗೆ ತನ್ನ ಹೆಂಡತಿಯಲ್ಲಿ ಏನಾದರೂ ತಪ್ಪು ಹುಡುಕಿ ಹೀಯಾಳಿಸಬೇಕೆಂಬ ಉದ್ದೇಶವಿರುತ್ತದೆ. ಹಾಗಾಗಿಯೇ ಅವನು ಹೆಂಡತಿ ನಿಂತರೆ ತಪ್ಪು ಕುಳಿತರೆ ತಪ್ಪು ಎಂದು ಅವಳಲ್ಲಿ ವಿನಾಕಾರಣ ತಪ್ಪುಗಳನ್ನು ಆರೋಪಿಸಿ ಹೀಯಾಳಿಸುತ್ತಿರುತ್ತಾನೆ. ಕಾರಣ ಅವನಿಗೆ ತನ್ನ ಹೆಂಡತಿಯಲ್ಲಿ ಪ್ರೀತಿ ಇರುವುದಿಲ್ಲ. ಸಮಾಜದ ಹೆದರಿಕೆಯಿಂದಾಗಿ ಅವಳೊಂದಿಗೆ ಬಾಳುತ್ತಿರುತ್ತಾನೆ ಅಷ್ಟೆ. ಈ ಗಾದೆ ಹೆಂಡತಿಯ ಮೇಲೆ ಪ್ರೀತಿಯಿಲ್ಲದ ಗಂಡನ ವರ್ತನೆಯನ್ನು ಚೆನ್ನಾಗಿ ಧ್ವನಿಸಿದೆ.

**7. "ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು"**

ಈ ಗಾದೆ ಪರಸ್ಪರ ಸಾಮರಸ್ಯವಿಲ್ಲದ ವ್ಯಕ್ತಿಗಳನ್ನು ಕುರಿತದ್ದಾಗಿದೆ. ಸಾಮರಸ್ಯವಿಲ್ಲದಿದ್ದಾಗ ಯಾವ ಕೆಲಸವೂ ಫಲಪ್ರದವಾಗುವುದಿಲ್ಲ. ಗಂಡ ಹೆಂಡಿರ ನಡುವೆಯೂ ಸಹ ಸಾಮರಸ್ಯವಿಲ್ಲದಿದ್ದರೆ ಮೇಲಿನ ಗಾದೆಯಂತೆ ಅವರ ಸಂಸಾರ ಗೋಳಿನ ಸಂಸಾರವಾಗುತ್ತದೆ. ಹೆಂಡತಿ ಹೇಳಿದ್ದನ್ನು ಗಂಡ ಒಪ್ಪುವುದಿಲ್ಲ, ಗಂಡ ಹೇಳಿದ್ದನ್ನು ಹೆಂಡತಿ ಒಪ್ಪುವುದಿಲ್ಲ. ಇಬ್ಬರೂ ಪರಸ್ಪರರ ಅಭಿಪ್ರಾಯಗಳನ್ನು ವಿರೋಧಿಸುತ್ತಾರೆ. ಅವರಿಬ್ಬರ ಮಧ್ಯೆ ಜಗಳವಾಗುವುದಂತೂ ಸರ್ವೇ ಸಾಮಾನ್ಯವಾಗಿರುತ್ತದೆ. ಗಾಡಿಗೆ ಕಟ್ಟಿದ ಎರಡು ಎತ್ತುಗಳು ಗಾಡಿಯನ್ನು ಸಮವಾದ ಶಕ್ತಿಯನ್ನು ಉಪಯೋಗಿಸಿ ಎಳೆದರೆ ಆ ಗಾಡಿ ಸರಾಗವಾಗಿ ಮುಂದೆ ಹೋಗುತ್ತದೆ. ಅದನ್ನು ಬಿಟ್ಟು ಒಂದು ಎತ್ತು ಗಾಡಿಯನ್ನು ಎಳೆಯುತ್ತಿದ್ದರೆ, ಮತ್ತೊಂದು ಎತ್ತು ಸುಮ್ಮನೆ ನಿಂತರೆ ಗಾಡಿ ಮುಂದೆ ಚಲಿಸುವುದು ಹೇಗೆ ? ಈ ಗಾದೆಯಲ್ಲಿ ಹೇಳಿರುವಂತೆ ಒಂದು ಗಾಡಿಗೆ ಒಂದು ಎತ್ತು ಒಂದು ಕೋಣವನ್ನು ಹೂಡಿದರೆ, ದಾರಿಯಲ್ಲಿ ಎತ್ತು ಗಾಡಿಯನ್ನು ಕಷ್ಟಪಟ್ಟು ಎಳೆಯುತ್ತಿದ್ದರೆ, ಕೋಣ ಕೆರೆಯಲ್ಲಿರುವ ನೀರನ್ನು ಕಂಡು ಗಾಡಿಯನ್ನು

ಬಲವಾಗಿ ನೀರಿನ ಕಡೆ ಎಳೆಯುತ್ತದೆ. ಆಗ ಗಾಡಿಯ ಚಲನೆ ಅಸ್ತವ್ಯಸ್ತವಾಗುತ್ತದೆ. ಅದೇ ರೀತಿ ಸಂಸಾರದಲ್ಲಿ ಸಾಮರಸ್ಯವಿಲ್ಲದಿದ್ದರೆ ಆ ಸಂಸಾರ ಬಿರುಗಾಳಿಗೆ ಸಿಕ್ಕಿದ ಗಾಳಿಪಟದಂತೆ ಸೂತ್ರ ಹರಿದು ಗಿರಗಿಟ್ಟೆ ಮಾಡತೊಡಗುತ್ತದೆ.

**8. "ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು"**

ಈ ಗಾದೆಯಲ್ಲಿ ವ್ಯಕ್ತಿಗಳಿಬ್ಬರು ಜಗಳವಾಡುವುದರಿಂದ ಬೇರೊಬ್ಬರಿಗೆ ನಷ್ಟವಾಗುತ್ತಿರುತ್ತದೆ ಎಂಬ ವಿಷಯ ತಿಳಿದುಬರುತ್ತದೆ. ಮಂತ್ರಿಗಳಿಬ್ಬರು ಜಗಳವಾಡುವುದರಿಂದ ದೇಶದ ಪ್ರಗತಿ ಕುಂಠಿತವಾಗುತ್ತದೆ. ತೊಂದರೆ ಅನುಭವಿಸುವವರು ಪ್ರಜೆಗಳು. ಇದೇ ರೀತಿ ಗಂಡ–ಹೆಂಡಿರು ಜಗಳವಾಡುತ್ತಿದ್ದರೆ ಅವರ ಮಕ್ಕಳನ್ನು ಕೇಳುವವರೇ ಇರುವುದಿಲ್ಲ. ಆ ಮಕ್ಕಳು ತಮ್ಮ ತಂದೆ–ತಾಯಿಗಳ ಜಗಳವನ್ನು ಕಂಡು ಯಾರ ಪರ ವಹಿಸುವುದಕ್ಕೂ ಆಗದೆ ಕಣ್ಣು ಬಾಯಿ ಬಿಡುತ್ತಾ ನಿಂತುಕೊಳ್ಳುತ್ತಾರೆ. ಏಕೆಂದರೆ ಆ ಮಕ್ಕಳಿಗೆ ಅಮ್ಮನೂ ಬೇಕು, ಅಪ್ಪನೂ ಬೇಕು. ಗಂಡ–ಹೆಂಡಿರ ಜಗಳದಲ್ಲಿ ಅವರ ಮಕ್ಕಳು ಕಂಗಾಲಾಗುತ್ತಾರೆ. ಅವರ ಬೆಳವಣಿಗೆ ಕುಂಠಿತವಾಗುತ್ತದೆ. ಅದಕ್ಕಾಗಿಯೇ ವಿವೇಕಿಗಳಾದ ಗಂಡ ಹೆಂಡಿರು ಮಕ್ಕಳ ಮುಂದೆ ಜಗಳವಾಡಬಾರದು ಎಂದು ಈ ಗಾದೆ ದಂಪತಿಗಳಿಗೆ ಎಚ್ಚರಿಕೆ ನೀಡುತ್ತದೆ.

**9. "ಕುಣಿಯಲಾರದವಳು ನೆಲ ಡೊಂಕು ಎಂದಳಂತೆ"**

ಯಾವುದೋ ಒಂದು ಕೆಲಸ ಮಾಡಲು ಆಗದಿದ್ದಾಗ ಜನ ಅದರಲ್ಲಿನ ಯಾವುದೋ ಒಂದು ದೋಷವನ್ನು ಎತ್ತಿ ತೋರಿಸಿ, ಈ ಕಾರಣದಿಂದ ಈ ಕೆಲಸ ಮಾಡಲಾಗಲಿಲ್ಲ ಎಂದು ಹೇಳುತ್ತಾರೆ. ತಮಗೆ ಆ ಕೆಲಸ ಮಾಡಲು ಸಾಮರ್ಥ್ಯವಿಲ್ಲವೆಂದು ಹೇಳಿಕೊಳ್ಳುವುದಿಲ್ಲ. ಆ ಮೂಲಕ ತಮ್ಮ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳುತ್ತಾರೆ. ಇಂಥ ಸಂದರ್ಭಗಳಲ್ಲಿ ಗಾದೆ ಬಳಕೆಯಾಗಿದೆ. ಸರಿಯಾಗಿ ಸಂಸಾರ ನಡೆಸಿಕೊಂಡು ಹೋಗದವಳು ಗಂಡನ ಮೇಲೆ ಏನಾದರೂ ಒಂದು ದೋಷಾರೋಪಣೆ ಮಾಡುತ್ತಾ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಾಳೆ. ತನಗೆ ಸರಿಯಾಗಿ ಸಂಸಾರ ನಡೆಸಿಕೊಂಡು ಹೋಗಲು ಬಾರದ್ದಕ್ಕೆ ಬೇರೆಯವರನ್ನು ದೂರುತ್ತಾಳೆ.

**10. "ಬಾಳಲಾರದವಳು ಬಾವಿಗೆ ಬಿದ್ದಳಂತೆ"**

ಈ ಗಾದೆಯನ್ನು ಸಹ ಅನೇಕ ಸಂದರ್ಭಗಳಲ್ಲಿ ಉಪಯೋಗಿಸುತ್ತಾರೆ. ಸರಿಯಾಗಿ ಸಂಸಾರ ನಡೆಸಿಕೊಂಡು ಹೋಗಲಾರದವಳು ಬಾವಿಗೆ ಬಿದ್ದು ಪ್ರಾಣ ಕಳೆದುಕೊಂಡಳಂತೆ ಎಂಬುದು ಈ ಗಾದೆಯ ಭಾವ. ಇಲ್ಲಿ ಆತ್ಮಹತ್ಯೆ ಪರಿಹಾರವಲ್ಲ. "ಈಸಬೇಕು ಇದ್ದು ಜೈಸಬೇಕು" ಎನ್ನುವ ಗಾದೆಯಂತೆ ಗೃಹಿಣಿಯಾದವಳು ಬಂದ ಕಷ್ಟಗಳನ್ನೆಲ್ಲ ಎದುರಿಸುತ್ತಾ ತನ್ನ ಜೀವನವನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಇದಿರು ನಿಂತು ಬಂದದ್ದನ್ನು ಧೈರ್ಯವಾಗಿ ಎದುರಿಸು ಎಂಬ ಸಂದೇಶವನ್ನು ಸಹ ಈ ಗಾದೆ ಸಾರುತ್ತದೆ.

**11. "ಹಾದರ ಹೆಚ್ಚು ದಿವಸ ಮುಚ್ಚಿಡುವುದಕ್ಕಾಗುವುದಿಲ್ಲ"**

ಹಾದರ ಅಂದರೆ ವ್ಯಭಿಚಾರ. ಗಂಡ ತನ್ನ ಹೆಂಡತಿಯಲ್ಲದೆ ಬೇರೊಬ್ಬಳೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರೆ ಅಥವಾ ಹೆಂಡತಿ ಗಂಡನಲ್ಲದೆ ಬೇರೆ ಪುರುಷನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರೆ ಅದು ಹಾದರ ಅನ್ನಿಸಿಕೊಳ್ಳುತ್ತದೆ. ಈ ವಿಷಯಗಳು ಹೆಚ್ಚು ದಿವಸ ಗುಟ್ಟಾಗಿ ಉಳಿಯುವುದಿಲ್ಲ ಎಂಬುದು ಈ ಗಾದೆಯ ಸಾರಾಂಶ. ಪ್ರಾರಂಭದಲ್ಲಿ ಈ ಸಂಬಂಧಗಳು ಗುಟ್ಟಾಗಿ ನಡೆದರೂ ಕಾಲಕ್ರಮೇಣ ಬೇರೆಯವರಿಂದ ಈ ಪ್ರಕರಣಗಳು ಗುರುತಿಸಲ್ಪಟ್ಟು ಊರಿನವರಿಗೆಲ್ಲ ತಿಳಿದು ಹೋಗುತ್ತದೆ. ಆಗ ಗಂಡ-ಹೆಂಡಿರ ಮಧ್ಯೆ ವಿವಾದಗಳೇರ್ಪಡುತ್ತವೆ. ನಿತ್ಯ ಜಗಳಗಳಾಗುತ್ತವೆ. ಇದು ಗಂಡ ಹೆಂಡಿರ ಸುಖ ಸಂಸಾರವನ್ನು ಹಾಳುಗೆಡಹುತ್ತದೆ. ಅನೇಕ ವೇಳೆ ವಿವಾಹ ವಿಚ್ಛೇದನಗಳೂ ನಡೆಯುತ್ತವೆ. ಈ ಪ್ರಕರಣಗಳು ದಾಂಪತ್ಯ ಜೀವನಕ್ಕೆ ಮಾರಕವೆಂದೇ ಹೇಳಬೇಕಾಗುತ್ತದೆ.

**12. "ಎರಡೂ ದಡ್ಡ (ದದ್ದ) ಹೊರಕ್ಕೆ ಹಾಕು"**

ಗಂಡ ಬುದ್ಧಿವಂತನಾಗಿರಬೇಕು. ಇಲ್ಲವೆ ಹೆಂಡತಿ ಬುದ್ಧಿವಂತಳಾಗಿರಬೇಕು. ಇಬ್ಬರೂ ದಡ್ಡರಾದರೆ ಆ ಸಂಸಾರ ಹಾಳಾಗಿ ಹೋಗುವುದರಲ್ಲಿ ಸಂಶಯವಿಲ್ಲ.

**13. "ಇಬ್ಬರು ಹೆಂಡಿರ ಕಾಟ, ಇರುಳು ತಿಗಣೆ ಕಾಟ"**

ಹಗಲೆಲ್ಲಾ ಇಬ್ಬರು ಹೆಂಡಿರು ಪರಸ್ಪರ ಜಗಳವಾಡುತ್ತಿರುತ್ತಾರೆ. ರಾತ್ರಿ ಏನಾದರೂ ಸರಿಯಾಗಿ ನಿದ್ದೆ ಮಾಡೋಣವೆಂದರೆ ತಿಗಣೆಗಳ ಕಾಟ. ಆ

ಗಂಡನ ಗತಿ ದೇವರಿಗೇ ಪ್ರೀತಿ ! ಈ ರೀತಿ ಕೆಲವರು ಜೀವಮಾನವಿಡೀ ಸುಖದಿಂದ ವಂಚಿತರಾಗುತ್ತಾರೆ.

## ೪. ಅಣ್ಣ–ತಮ್ಮ, ಅಕ್ಕ–ತಂಗಿಯರನ್ನು ಕುರಿತ ಗಾದೆಗಳು

**1. ಹುಟ್ಟುವಾಗ ಅಣ್ಣತಮ್ಮಂದಿರು, ಬೆಳೆಯುವಾಗ ದಾಯಾದಿಗಳು**

ಈ ಗಾದೆಯಲ್ಲಿ ಅಣ್ಣ–ತಮ್ಮಂದಿರು ಬೆಳೆಯುವಾಗ ಹೇಗೆ ಬದಲಾಗುತ್ತಾರೆ ಎಂಬ ವಿಷಯವನ್ನು ತಿಳಿಸುತ್ತದೆ. ಮದುವೆಯಾಗುವುದಕ್ಕೆ ಮುಂಚೆ ಅಣ್ಣ–ತಮ್ಮಂದಿರು ಅನ್ಯೋನ್ಯವಾಗಿಯೇ ಇರುತ್ತಾರೆ. ಪ್ರೀತಿ ವಿಶ್ವಾಸಗಳಿಂದಲೇ ನಡೆದುಕೊಳ್ಳುತ್ತಿರುತ್ತಾರೆ. ಆದರೆ ಯಾವಾಗ ಅಣ್ಣ ತಮ್ಮಂದಿರು ಮದುವೆಯಾಗುತ್ತಾರೋ, ಅವರ ಹೆಂಡತಿಯರು ಮನೆಗೆ ಬರುತ್ತಾರೋ ಆಗ ಅಣ್ಣ ತಮ್ಮಂದಿರಲ್ಲಿ ವಿರಸ ಪ್ರಾರಂಭವಾಗುತ್ತದೆ. ಅವರಲ್ಲಿ ಮನಸ್ತಾಪಗಳಾಗಿ, ಜಗಳಗಳೂ ನಡೆಯುವುದುಂಟು. ಹಾಗಾಗಿ ಮದುವೆಯಾದ ನಂತರ ಅಣ್ಣ–ತಮ್ಮಂದಿರು ಬೇರೆ ಬೇರೆ ಮನೆಗಳಲ್ಲಿ ಸಂಸಾರ ಹೂಡುವುದು ಸರ್ವೇಸಾಮಾನ್ಯವಾಗಿದೆ. 'ನಾಲ್ಕು ಕ್ರಾಪುಗಳು ಒಟ್ಟಿಗೆ ಇರಬಹುದು, ಎರಡು ಜಡೆಗಳು ಒಟ್ಟಿಗೆ ಇರಲಾರವು' ಎಂಬ ಮತ್ತೊಂದು ಗಾದೆ ಹುಟ್ಟಿಕೊಂಡಿದೆ. ಚಿಕ್ಕಪ್ಪ–ದೊಡ್ಡಪ್ಪಂದಿರ ಮಕ್ಕಳನ್ನು ದಾಯಾದಿಗಳು ಅನ್ನುತ್ತೇವೆ. ಬೆಳೆಯುತ್ತ ಹೋದಂತೆ ಒಂದೇ ತಾಯಿಯ ಮಕ್ಕಳಲ್ಲೂ ಈ ಗುಣ ಬರುತ್ತದೆಂಬುದು ಈ ಗಾದೆಯ ಸಾರಾಂಶ.

**2. "ಅಣ್ಣ ಬದುಕಿದರೆ ಅತ್ತಿಗೆ ಮಕ್ಕಳಿಗೆ, ಅಕ್ಕ ಬದುಕಿದರೆ ಭಾವ ಮಕ್ಕಳಿಗೆ**

ಇಲ್ಲಿ ತಂಗಿಯಾದವಳಿಗೆ ಅಣ್ಣ ಶ್ರೀಮಂತನಾದರೂ, ಅಕ್ಕ ಶ್ರೀಮಂತಳಾದರೂ ಏನೂ ಪ್ರಯೋಜನವಿಲ್ಲವೆಂಬುದೇ ಇದರ ಭಾವ. ಏಕೆಂದರೆ ಅಣ್ಣನಾದವನು ಅನುಕೂಲ ಸ್ಥಿತಿಗೆ ಬಂದರೆ ಅವನು ತನ್ನ ಹೆಂಡತಿ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ತಂಗಿಗೆ ಅಲ್ಪಸ್ವಲ್ಪ ಸಹಾಯ ಮಾಡಬಹುದು ಅಷ್ಟೆ. ಅವಳ ಬಡತನ ನಿವಾರಣೆ ಮಾಡುವುದಕ್ಕೆ ಹೋಗುವುದಿಲ್ಲ. ಅದೇ ರೀತಿ ಅಕ್ಕ ಅನುಕೂಲಸ್ಥಳಾದರೆ ಅವಳ ಗಂಡ ಮಕ್ಕಳು ಸುಖವಾಗಿರುತ್ತಾರೆಯೇ ಹೊರತು ತಂಗಿಗೆ ಏನೂ ಪ್ರಯೋಜನವಾಗುವುದಿಲ್ಲ. ಅಕ್ಕ ಎಷ್ಟೇ

ಶ್ರೀಮಂತಳಾದರೂ ತಂಗಿಯ ಬಡತನ ನೀಗುವುದಕ್ಕೆ ಪ್ರಯತ್ನಿಸುವುದಿಲ್ಲ ಎಂಬುದೇ ಈ ಗಾದೆಯ ಭಾವ. ಆದ್ದರಿಂದ ತಂಗಿಯಾದವಳು ತನ್ನ ಅಣ್ಣ ತಮ್ಮಂದಿರನ್ನು ಅವಲಂಬಿಸದೆ, ತನ್ನ ಗಂಡನನ್ನು ಅವಲಂಬಿಸಿ, ಚೆನ್ನಾಗಿ ದುಡಿದು ಅಭಿವೃದ್ಧಿಗೆ ಬರಬೇಕೆಂಬುದೇ ಈ ಗಾದೆಯ ಆಶಯ.

### ೫. ತಂದೆ–ತಾಯಿ, ತೌರು, ಬಂಧುತ್ವ ಕುರಿತ ಗಾದೆಗಳು

**1. "ತಂದೆ ಇದ್ದರೆ ಬಳಗ ಹೆಚ್ಚು ; ತಾಯಿ ಇದ್ದರೆ ತೌರು ಹೆಚ್ಚು. ನೂರಕ್ಕೆ ಹೆಚ್ಚು ಪತಿ ಪುರುಷ"**

ತಂದೆ ಇದ್ದರೆ ತಂದೆಯ ಸಂಬಂಧಿಗಳಾದ ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಪ್ಪ–ದೊಡ್ಡಮ್ಮ, ಸೋದರತ್ತೆ–ಸೋದರಮಾವ ಮತ್ತು ಅವರ ಮಕ್ಕಳು ಇವರೆಲ್ಲರ ಅಕ್ಕರೆ ಪ್ರೀತಿಗಳೂ ಇರುತ್ತವೆ. ಆದ್ದರಿಂದಲೇ ತಂದೆ ಇದ್ದರೆ ಬಳಗ ಹೆಚ್ಚು ಅನ್ನುವುದು. ಇದೇ ರೀತಿ ತಾಯಿ ಇದ್ದರೆ ತೌರು ಹೆಚ್ಚು. ಮದುವೆಯಾಗಿ ಗಂಡನ ಮನೆಗೆ ಹೋದ ಹೆಣ್ಣು ಮಗಳಿಗೆ ತಾಯಿ ಇದ್ದರೆ ಪದೇಪದೇ ತೌರಿಗೆ ಹೋಗಬೇಕೆನಿಸುತ್ತದೆ. ಆಗ ತೌರು ಆಕೆಯ ಪಾಲಿಗೆ ಪ್ರೀತಿ–ಪ್ರೇಮಗಳ ಮನೆಯಾಗಿರುತ್ತದೆ. ಇದೇ ರೀತಿ ಸಾವಿರಕ್ಕೆ ಹೆಚ್ಚು ಪತಿ ಪುರುಷ. ಎಲ್ಲರಿಗಿಂತ ಪತ್ನಿಯಾದವಳಿಗೆ ಪತಿಯೇ ಮುಖ್ಯ ಎಂಬುದು ಇದರ ಭಾವ. ಪತಿ ಇದ್ದರೆ ಅವಳಿಗೆ ಎಲ್ಲೆಲ್ಲೂ ಗೌರವ. ಸುಮಂಗಲೆಯೆಂದು ಅವಳು ಯಾವ ಮನೆಗೆ ಹೋಗಲಿ ಗೌರವಿಸುತ್ತಾರೆ. ಹಾಗಾಗಿಯೇ ಈ ಗಾದೆಯಲ್ಲಿ ಹೆಣ್ಣಿನ ಬಾಳಿನಲ್ಲಿ ಗಂಡನ ಪ್ರಾಮುಖ್ಯತೆಯನ್ನು ಹೇಳಿದೆ.

**2. "ತಾಯಿ ಇಲ್ಲದ ತೌರಿಗೆ ಮಗಳು ಹೋಗುವುದು, ನೀರಿಲ್ಲದ ಕೆರೆಗೆ ಕರು ಹೋಗುವುದು ಎರಡೂ ಒಂದೇ"**

ತಾಯಿ ಇಲ್ಲದ ತೌರು ಮಗಳ ಪಾಲಿಗೆ ಅಷ್ಟು ಹಿತಕರವಲ್ಲವೆಂದು ಈ ಗಾದೆಯ ಭಾವ. ಏಕೆಂದರೆ ತಾಯಿಯಿಲ್ಲದ ತೌರಿನಲ್ಲಿ ಅಣ್ಣ–ಅತ್ತಿಗೆ ಮತ್ತು ಅವರ ಮಕ್ಕಳು ಇರುತ್ತಾರೆ. ಅಣ್ಣನಿಗೆ ತಂಗಿ ಅನ್ನುವ ಮಮಕಾರವಿದ್ದರೂ ಅತ್ತಿಗೆಯಾದವಳಿಗೆ ನಾದಿನಿಯ ಮೇಲಿನ ಪ್ರೀತಿ ಅಷ್ಟಕಷ್ಟೇ. ನಾದಿನಿಯಾದವಳು ಪದೇಪದೇ ತೌರಿಗೆ ಬರಬಾರದೆಂಬುದೇ ಅತ್ತಿಗೆಯ ಆಸೆಯಾಗಿರುತ್ತದೆ. ಕಾರಣ

ಅತ್ತಿಗೆಯಾದವಳಿಗೆ ತನ್ನ ಗಂಡ ಮಕ್ಕಳು ಮುಂದುವರಿಯುವುದು ಮುಖ್ಯವಾಗುತ್ತದೆ. ನಾದಿನಿ ಪದೇಪದೇ ತೌರಿಗೆ ಬರುವುದರಿಂದ ತಮ್ಮ ಏಳಿಗೆಗೆ ತೊಂದರೆ ಎಂದೇ ಅತ್ತಿಗೆಯಾದವಳು ಭಾವಿಸುವ ಸಾಧ್ಯತೆಗಳಿರುತ್ತವೆ. ಹಾಗಾಗಿಯೇ ತಾಯಿ ಇಲ್ಲದ ತೌರು ಮಗಳ ಪಾಲಿಗೆ ಅಷ್ಟೇನೂ ಹಿತಕರವಾಗಿರುವುದಿಲ್ಲ. ನೀರಿಲ್ಲದ ಕೆರೆಗೆ ಕರು ನೀರನ್ನರಸಿಕೊಂಡು ಹೋಗುತ್ತದೆ. ಆದರೆ ಕೆರೆಯಲ್ಲಿ ನೀರಿಲ್ಲದುದನ್ನು ಕಂಡು ಕರುವು ಬಾಯಾರಿಕೆಯಿಂದ ಬಳಲಿ, ನಿರಾಸೆಯಿಂದ ವಾಪಸ್ ಬರುತ್ತದೆ. ಇದೇ ಸ್ಥಿತಿ ತಾಯಿ ಇಲ್ಲದ ತೌರಿಗೆ ಹೋದ ಹೆಣ್ಣು ಮಗಳದೂ ಆಗಿರುತ್ತದೆಂದು ಈ ಗಾದೆಯ ಭಾವ.

**3. "ಒಲಿದರೆ ನಾರಿ, ಮುನಿದರೆ ಮಾರಿ"**

ಗಂಡನಾದವನು ಹೆಂಡತಿಯನ್ನು ಒಲಿಸಿಕೊಂಡು ಸಂಸಾರ ಮಾಡಿದರೆ ಆ ಮನೆ ಸ್ವರ್ಗ ಸಮಾನವಾಗಿರುತ್ತದೆ. ಹಾಗಲ್ಲದೆ ಹೆಣ್ಣನ್ನು ಪದೇಪದೇ ಹೀಯಾಳಿಸುತ್ತ ಅವಳನ್ನು ಸಿಟ್ಟಿಗೆಬ್ಬಿಸಿದರೆ, ಆ ಮನೆ ನರಕವಾಗುತ್ತದೆ. ಅಂದರೆ ಗಂಡ-ಹೆಂಡಿರ ಮಧ್ಯೆ ಪ್ರೀತಿ ಇರಬೇಕಾದ್ದು ಮುಖ್ಯ ಎಂಬುದು ಈ ಗಾದೆಯ ಆಶಯ. ಹಾಗಲ್ಲದಿದ್ದರೆ ಹೆಂಡತಿಗೆ ಸಿಟ್ಟು ಬಂದರೆ ಅವಳು ಮಾರಿಯ ಅವತಾರ ತಾಳಿ ಇಡೀ ಸಂಸಾರವನ್ನೇ ನಾಶ ಮಾಡುತ್ತಾಳೆ ಎನ್ನುವುದು ಈ ಗಾದೆಯ ಅರ್ಥ.

**4. "ತಾಯಿಯಂತೆ ಮಗಳು ನೂಲಿನಂತೆ ಸೀರೆ"**

ಈ ಗಾದೆಯಲ್ಲಿ ಮಗಳಾದವಳು ತಾಯಿಯ ಗುಣಗಳನ್ನು ಪಡೆದಿರುತ್ತಾಳೆ ಎಂದು ಹೇಳಲಾಗಿದೆ. ಅಂದರೆ ತಾಯಿಯೊಂದಿಗೇ ಬೆಳೆಯುತ್ತ ಬಂದ ಮಗಳು ತಾಯಿ ಮಾಡುತ್ತಿರುವುದನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸುತ್ತಿರುತ್ತಾಳೆ. ಹಾಗಾಗಿ ತಾಯಿ ಮಾಡುತ್ತಿದ್ದ ರೀತಿಯಲ್ಲೇ ಎಲ್ಲ ಕೆಲಸಗಳನ್ನು ಗಂಡನ ಮನೆಯಲ್ಲೂ ಮಾಡಲು ಪ್ರಾರಂಭಿಸುತ್ತಾಳೆ. ಇದು ಅತ್ತೆಗೆ ಹಿಡಿಸದೇ ಹೋಗಬಹುದು. ಆದ್ದರಿಂದ ಸೊಸೆಯಾದವಳು ಅತ್ತೆಯ ಮನಸ್ಸನ್ನು ತಿಳಿದುಕೊಂಡು, ಅದರಂತೆ ವರ್ತಿಸಿದರೆ ಯಾವುದೇ ಸಂಘರ್ಷ ಅವರ ಮಧ್ಯೆ ಉಂಟಾಗುವುದಿಲ್ಲ. ನೂಲು ಹೇಗಿದ್ದರೆ ಸೀರೆ ಅದೇ ರೀತಿ ತಯಾರಾಗುತ್ತದೆ. ಅದೇ ರೀತಿ ತಾಯಿಯ ಹೆಚ್ಚು ಪಾಲು ಗುಣಗಳೆಲ್ಲವೂ ಮಗಳಲ್ಲೂ ಬಂದಿರುತ್ತವೆ. ಆದ್ದರಿಂದ ಹೆಣ್ಣು ತರುವಾಗ ಬುದ್ಧಿವಂತರಾದವರು ಹೆಣ್ಣಿನ ತಾಯಿಯ ಸ್ವಭಾವವನ್ನು ಪರೀಕ್ಷಿಸುತ್ತಾರೆ.

**5. "ತಾಯಿಗಿಂತ ಬಂಧುವಿಲ್ಲ"**

ಈ ಗಾದೆ ತಾಯಿಯ ಮಹತ್ವವನ್ನು ತಿಳಿಸುತ್ತದೆ. ಜಗತ್ತಿನಲ್ಲಿ ಮಕ್ಕಳಿಗೆ ತಾಯಿಗಿಂತ ಹಿತ ಬಯಸುವವರು ಯಾರೂ ಇರುವುದಿಲ್ಲ. ಆದ್ದರಿಂದ ಮಕ್ಕಳು ತಾಯಿಯನ್ನು ಅನುಮಾನ ದೃಷ್ಟಿಯಿಂದ ನೋಡಬಾರದು. ತಾಯಿಯನ್ನು ಮಕ್ಕಳು ಹೆಚ್ಚು ಗೌರವಿಸಬೇಕು. ಕಷ್ಟಕಾಲದಲ್ಲಿ ತಕ್ಷಣ ನೆರವಿಗೆ ಬರುವವಳೇ ತಾಯಿ ಎಂದು ಈ ಗಾದೆ ತಿಳಿಸುತ್ತದೆ.

**6. "ದೇಶಕ್ಕೆ ದೊರೆಯಾದರೂ ತಾಯಿಗೆ ಮಗನೇ"**

ದೇಶಕ್ಕೆ ದೊರೆಯಾದ ಮಗನನ್ನು ಅವನ ತಾಯಿ ಹೆಸರು ಹಿಡಿದೇ ಕರೆಯುತ್ತಾಳೆ. ಅವನನ್ನು ಮಹಾರಾಜರೇ ಎಂದು ಕರೆಯುವುದಿಲ್ಲ. ಅಂದರೆ ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವನಾದರೂ ತಾಯಿಗೆ ಅವನು ಮಗುವಿನ ಸಮಾನನೇ. ಮಹಾರಾಜನಾದರೂ ತಾಯಿಯ ಕಾಲಿಗೆ ನಮಸ್ಕರಿಸಬೇಕು. ಅವಳಿಗೆ ಮೊದಲ ಗೌರವ ಸಲ್ಲಿಸಬೇಕು.

**7. "ಗುಣ ನೋಡಿ ಹೆಣ್ಣು ಕೊಡು"**

ಈ ಗಾದೆಯಲ್ಲಿ ಹೆಣ್ಣು ಕೊಡಬೇಕಾದ ತಂದೆ–ತಾಯಿಯರು ಗಂಡಿನ ಗುಣವನ್ನು ಪರೀಕ್ಷೆ ಮಾಡಬೇಕೆಂದು ಹೇಳಲಾಗಿದೆ. ಈಗಿನ ಕಾಲದಲ್ಲಿ ಹೆಣ್ಣು ಹೆತ್ತ ತಂದೆ–ತಾಯಿಯರು ಗಂಡಿನ ರೂಪ, ವರಮಾನ, ಕುಲ, ಆಸ್ತಿ, ಅಂತಸ್ತು, ಉದ್ಯೋಗಗಳನ್ನು ನೋಡಿ ಹೆಣ್ಣು ಕೊಡುತ್ತಾರೆ. ಅವರು ಗಂಡಿನ ಗುಣವನ್ನು ಪರೀಕ್ಷೆ ಮಾಡುವುದೇ ಇಲ್ಲ. ಆಗ ಗುಣವಂತನಲ್ಲದ ವರ ಎಷ್ಟೇ ಸಂಪತ್ತಿದ್ದರೂ ತನ್ನ ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳಲಾರ. ಆಗ ಹೆಣ್ಣಿನ ತಂದೆ–ತಾಯಿಯರು ದುಃಖದಿಂದ ಗೋಳಾಡುತ್ತಾರೆ. ಆದ್ದರಿಂದ ಇಲ್ಲಿ ಗಂಡಿನ ಗುಣ ಎಲ್ಲಕ್ಕಿಂತ ಮುಖ್ಯವಾದದ್ದು ಎಂದು ಈ ಗಾದೆಯು ಸಾರಿ ಸಾರಿ ಹೇಳುತ್ತದೆ.

**8. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು"**

ಮದುವೆ ಮಾಡಿ ಕೊಟ್ಟ ಮೇಲೆ ಹೆಣ್ಣು ಗಂಡಿನ ಕುಲಕ್ಕೆ ಸೇರಿ ಬಿಡುತ್ತಾಳೆ. ತೌರು ಮನೆಯವರ ಕುಲದಿಂದ ಹೊರಕ್ಕೆ ಹೋಗಿಬಿಡುತ್ತಾಳೆ. ಆದ್ದರಿಂದಲೇ ಈ ಗಾದೆ ರೂಢಿಯಲ್ಲಿದೆ.

### 9. "ಕರೆದು ಹೆಣ್ಣು ಕೊಟ್ಟರೆ ಮಲರೋಗ ಹಿಡಿಯಿತಂತೆ"

ಒಂದು ಗಂಡಿಗೆ ಹೆಣ್ಣಿನ ತಂದೆ ತಾಯಿಗಳು ತಾವಾಗಿಯೇ ಕರೆದುಕೊಂಡು ಹೋಗಿ ಹೆಣ್ಣು ಕೊಟ್ಟು ಮದುವೆ ಮಾಡಿದರೆ, ಅವನು ಮಲರೋಗ ಹಿಡಿದವನಂತೆ ಆಡುತ್ತಾನೆ. ಇದೇ ರೀತಿ ಕಷ್ಟಪಡದೆ ಸುಲಭವಾಗಿ ಯಾವುದೇ ಸೌಲಭ್ಯ ದೊರೆತಾಗ ಮನುಷ್ಯನು ಅದನ್ನು ಸೂಕ್ತವಾಗಿ ಬಳಸಿಕೊಳ್ಳದೆ ಹುಚ್ಚು-ಹುಚ್ಚಾಗಿ ಆಡುತ್ತಾನೆ.

## ೬. ಅತ್ತೆ–ಸೊಸೆ ಕುರಿತ ಗಾದೆಗಳು

### 1. "ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ"

ಅತ್ತೆಯು ತಾನು ಪ್ರಬಲಳಾಗಿರುವವರೆಗೂ ಸೊಸೆಯನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿರುತ್ತಾಳೆ. ಆಗ ಸೊಸೆ ಅತ್ತೆ ಹೇಳಿದ ಹಾಗೆ ಕೇಳಿಕೊಂಡು ಇರುತ್ತಾಳೆ. ಆದರೆ ವಯಸ್ಸಿನ ಕಾರಣದಿಂದ ಅತ್ತೆ ದುರ್ಬಲಳಾದಾಗ ಸೊಸೆ ಅತ್ತೆಯನ್ನು ಮೂಲೆಗೆ ತಳ್ಳಿ ತಾನು ಅಧಿಕಾರ ವಹಿಸಿಕೊಳ್ಳುತ್ತಾಳೆ. ಆಗ ಅತ್ತೆ ಸೊಸೆ ಹೇಳಿದ ಹಾಗೆ ಕೇಳಿಕೊಂಡಿರಬೇಕಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಎಲ್ಲರಿಗೂ ಒಂದೊಂದು ಕಾಲ ಬರುತ್ತದೆ ಎನ್ನುವ ಅರ್ಥದಲ್ಲಿ ಈ ಗಾದೆ ಬಳಸುತ್ತಾರೆ.

### 2. "ಅಂಗ್ರನಿಗೆ ಹಸಿಯಿಲ್ಲ ; ಸೊಸೆಗೆ ಬಿಸಿಯಿಲ್ಲ"

ಹಿಂದಿನ ಕಾಲದಲ್ಲಿ ಸೊಸೆಯಾದವಳು ಎಲ್ಲರ ಊಟವಾದ ನಂತರ ತಾನು ಊಟ ಮಾಡಬೇಕಾಗಿದ್ದಿತು. ಆದ್ದರಿಂದ ಅವಳು ಊಟ ಮಾಡುವ ಸಮಯಕ್ಕೆ ಆಹಾರ ಪದಾರ್ಥಗಳು ಬಿಸಿ ಕಳೆದುಕೊಂಡು ತಣ್ಣಗಾಗಿರುತ್ತಿದ್ದವು. ಆಕೆ ಕಡೆಯಲ್ಲಿ ಉಣ್ಣುತ್ತಿದ್ದುದರಿಂದ ಆರಿದ ಆಹಾರವನ್ನೇ ಸೇವಿಸಬೇಕಾಗಿತ್ತು. ಆದರೆ ಈಗ ಕಾಲ ಬದಲಾಗಿದೆ. ಸೊಸೆಯೂ ಎಲ್ಲರೊಡನೆಯೇ ಊಟಕ್ಕೆ ಕುಳಿತು ಬಿಸಿಬಿಸಿ ಊಟ ಮಾಡುತ್ತಾಳೆ. ಅಂಗ್ರನಿಗೆ ಹಸಿಯಿಲ್ಲ ಅಂದರೆ ಅಂಗ್ರ ಗಿಡವನ್ನು ಸೌದೆಗೆ ಉಪಯೋಗಿಸುತ್ತಾರೆ. ಈ ಸೌದೆ ಹಸಿಯಾಗಿದ್ದರೂ ಚೆನ್ನಾಗಿ ಉರಿಯುತ್ತದೆ. ಇಲ್ಲಿ ಹಸಿ–ಬಿಸಿ ಎನ್ನುವ ಪ್ರಾಸ ಹೊಂದಾಣಿಕೆಗಾಗಿ ಇವೆರಡೂ ಒಟ್ಟಾಗಿ ಸೇರಿಸಲಾಗಿದೆ. ಹಾಗೆಯೇ ಅರ್ಥವಂತಿಕೆಯೂ ಇದೆ.

**3. "ಅತ್ತೆ ಮೇಲಿನ ಸಿಟ್ಟು ಕೊತ್ತಿ ಮೇಲೆ"**

ಈ ಗಾದೆಯಲ್ಲಿ ಸೊಸೆಯ ಅಸಹಾಯಕತೆಯನ್ನು ಹೇಳಲಾಗಿದೆ. ಅತ್ತೆಯ ಕೆಲವು ನಡವಳಿಕೆಗಳಿಂದ ಸೊಸೆಗೆ ಅತ್ತೆಯ ಮೇಲೆ ಸಿಟ್ಟು ಬರುತ್ತದೆ. ಆದರೆ ಮನೆಗೆ ಯಜಮಾನಿಯಾದ ಅತ್ತೆಯನ್ನು ಬಯ್ಯುವಂತಿಲ್ಲ. ಆದ್ದರಿಂದ ಅವಳು ಕಂಡುಕೊಂಡ ಉಪಾಯವೆಂದರೆ, ಮನೆಯಲ್ಲಿ ಸಾಕಿದ ಬೆಕ್ಕಿಗೆ ಒಂದೇಟು ಹಾಕುತ್ತಾಳೆ. ಆಗ ಅವಳಿಗೆ ಸಮಾಧಾನವಾಗುತ್ತದೆ. ಈ ರೀತಿ ಅವಳು ಅತ್ತೆಯ ಮೇಲಿನ ಸಿಟ್ಟನ್ನು ಬೆಕ್ಕಿಗೆ (ಕೊತ್ತಿ) ಹೊಡೆಯುವುದರ ಮೂಲಕ ತೀರಿಸಿಕೊಳ್ಳುತ್ತಾಳೆ.

**4. "ಊರಿಗೆ ಬಂದವಳು ನೀರಿಗೆ ಬರದೆ ಇರುತ್ತಾಳೆಯೇ ?"**

ಹಳ್ಳಿಯ ಶ್ರೀಮಂತರ ಮನೆಗೆ ಒಬ್ಬಳು ಸೊಸೆ ಬರುತ್ತಾಳೆ. ಆ ಹೆಣ್ಣು ಮಗಳನ್ನು ನೋಡಬೇಕೆಂದು ಹಳ್ಳಿಗರಿಗೆ ಆಸೆ. ಅವಳು ಎಂದಾದರೂ ನೀರು ತೆಗೆದುಕೊಂಡು ಹೋಗಲು ಊರಿನ ಮುಂದಿನ ಬಾವಿಗೆ ಬಂದೇ ಬರುತ್ತಾಳೆ. ಆಗ ನೋಡಬಹುದು ಎಂದುಕೊಳ್ಳುತ್ತಾರೆ.

## ೭. ದಾನಕ್ಕೆ ಸಂಬಂಧಿಸಿದ ಗಾದೆಗಳು

**1. "ದಾನಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿದರಂತೆ"**

ಒಂದು ವಸ್ತ್ರವನ್ನು ದಾನವಾಗಿ ತೆಗೆದುಕೊಂಡ ವ್ಯಕ್ತಿ ಆ ವಸ್ತುವಿನ ಪರಿಮಾಣ, ಗುಣಮಟ್ಟ ಎಲ್ಲವನ್ನೂ ಅಳತೆ ಮಾಡಿದ ಹಾಗೆ ಎಂದು ಈ ಗಾದೆಯ ಅರ್ಥ. ಅಂದರೆ ದಾನವನ್ನು ಪಡೆದುಕೊಂಡ ವ್ಯಕ್ತಿ ಆ ವಸ್ತುವನ್ನು ದುಡ್ಡುಕೊಟ್ಟುಕೊಂಡು ತಂದವರ ಹಾಗೆ ಹಿಂದೆ ಮುಂದೆ ತಿರುಗಿಸಿ ಪರೀಕ್ಷಿಸುತ್ತಾನೆ. ದಾನ ಪಡೆದುಕೊಂಡ ವ್ಯಕ್ತಿ ದಾನ ಕೊಟ್ಟವನಿಗೆ ಕೃತಜ್ಞನಾಗಿರಬೇಕು. ಅಂದರೆ ಇಲ್ಲಿ ವ್ಯಕ್ತಿ ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾನೆ. ಇದು ತಪ್ಪು ಎಂಬುದು ಇಲ್ಲಿಯ ಭಾವ.

**2. "ಬಲಗೈ ಕೊಟ್ಟ ದಾನ ಎಡಗೈಗೆ ಗೊತ್ತಾಗಬಾರದು"**

ದಾನ ಕೊಡುವ ವ್ಯಕ್ತಿ ತಾನು ಕೊಡುವ ದಾನವನ್ನು ಎಲ್ಲರಿಗೂ ಕಾಣುವಂತೆ ಕೊಡಬಾರದು. ಅಂದರೆ 'ಇಗೋ ನಾನು ದಾನ ಮಾಡುತ್ತಿದ್ದೇನೆ' ಎಂದು

ಪ್ರಚಾರ ಮಾಡಬಾರದು. ಬಲಗೈಲಿ ಕೊಟ್ಟ ದಾನ ಎಡಗೈಗೆ ಗೊತ್ತಾಗಬಾರದು. ಈ ರೀತಿ ನಿಸ್ವಾರ್ಥ ಭಾವನೆಯಿಂದ, ಹೊಗಳಿಸಿಕೊಳ್ಳಬೇಕೆಂಬ ಇಚ್ಛೆ ಇಲ್ಲದೆ ಮಾಡಿದ ದಾನವೇ ಶ್ರೇಷ್ಠ ಎಂಬುದು ಈ ಗಾದೆಯ ಸಾರಾಂಶ.

3. "ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ"

ತಾನು ಮಾಡಿದ ದಾನ ಯಾವತ್ತಿದ್ದರೂ ತನ್ನನ್ನು ಕಾಯುತ್ತದೆ. ತನಗೆ ಕಷ್ಟ ಬಂದಾಗ ಬೇರೆಯವರು ನನಗೂ ಸಹಾಯ ಮಾಡುತ್ತಾರೆ ಎಂಬ ನಂಬಿಕೆ ಇರಬೇಕು. ದಾನ ಮಾಡದೆ ಎಲ್ಲ ಸಂಪತ್ತನ್ನೂ ಬಚ್ಚಿಟ್ಟರೆ ಅದು ಬೇರೆಯವರ ಪಾಲಾಗುವುದು ಖಂಡಿತ. ಆದ್ದರಿಂದ ತನ್ನ ಸಂಪತ್ತಿನಲ್ಲಿ ಸ್ವಲ್ಪ ಭಾಗವನ್ನಾದರೂ ದಾನ ಮಾಡಬೇಕು ಎಂಬುದು ಈ ಗಾದೆಯ ಹೇಳಿಕೆ. ಇಲ್ಲಿ ದಾನದ ಶ್ರೇಷ್ಠತೆಯನ್ನು ಹೇಳಿದೆ.

## ೮. ಬಡತನ ಕುರಿತ ಗಾದೆಗಳು

1. "ಬಡವ ನೀ ಮಡಗಿದ ಹಾಗೆ ಇರು"

ಬಡವನು ನಿಸ್ಸಹಾಯಕನಾಗಿರುತ್ತಾನೆ. ಬಡತನ ಅವನನ್ನು ಕಿತ್ತು ತಿನ್ನುತ್ತಿರುತ್ತದೆ. ಆದ್ದರಿಂದ ಅವನು ಜಂಬ ಪಡಬಾರದು. ಸಿರಿವಂತರ ಅವಕೃಪೆಗೆ ಒಳಗಾಗದಂತೆ ಎಚ್ಚರಿಕೆಯಿಂದ ತಾನಾಯಿತು ತನ್ನ ಪಾಡಾಯಿತು" ಎಂದು ಜೀವಿಸಬೇಕು ಎಂಬುದು ಈ ಗಾದೆಯ ಅಂತರಾರ್ಥ.

2. "ಬಡವನ ಸಿಟ್ಟು ದವಡೆಗೆ ಮೂಲ"

ಈ ಗಾದೆಯಲ್ಲಿ ಬಡವನು ಕೋಪಗೊಂಡು ಸಿರಿವಂತರ ಮೇಲೆ ಎಗರಾಡಿದರೆ ಏನು ಪರಿಣಾಮವಾಗುತ್ತದೆ ಎಂಬುದನ್ನು ತಿಳಿಸಲಾಗಿದೆ. ಬಡವನ ಸಿಟ್ಟನ್ನು ಯಾರೂ ಕೇಳುವುದಿಲ್ಲ. ಸಿರಿವಂತರು ತನ್ನ ಮೇಲೆ ಸಿಟ್ಟಾದ ಬಡವನ ಕೆನ್ನೆಗೆ ಹೊಡೆದರೂ ಕೇಳುವವರಿರುವುದಿಲ್ಲ. ಏಕೆಂದರೆ ಎಲ್ಲರೂ ಸಿರಿವಂತನ ಪರವಾಗಿಯೇ ಮಾತನಾಡುತ್ತಾರೆ. ಉಳಿದವರೆಲ್ಲರೂ ಸಿರಿವಂತನ ದಾಕ್ಷಿಣ್ಯಕ್ಕೆ ಒಳಗಾಗಿರುತ್ತಾರೆ. ಹಾಗಾಗಿ ಬಡವನು ಸಿರಿವಂತನ ಸಹವಾಸಕ್ಕೆ ಹೋಗದೆ ಎಚ್ಚರಿಕೆಯಿಂದ ಇರಬೇಕೆಂಬುದೇ ಈ ಗಾದೆಯ ಅಂತರಾರ್ಥ.

## ೯. ಜೂಜು–ಕುಡಿತ ಕುರಿತ ಗಾದೆಗಳು

### 1. "ಕುಡುಕ ಸ್ನೇಹಿತನಲ್ಲ, ಜೂಜುಕೋರ ಸತ್ಯವಂತನಲ್ಲ"

ಈ ಗಾದೆಯಲ್ಲಿ ಕುಡಿತ ಮತ್ತು ಜೂಜಿನ ವ್ಯಸನಗಳಿಗೆ ಬಲಿಯಾದ ವ್ಯಕ್ತಿಗಳ ಮಾನಸಿಕ ಸ್ಥಿತಿ ಕುರಿತು ಹೇಳಲಾಗಿದೆ. ಎಷ್ಟೇ ಸ್ನೇಹಿತನಾಗಿದ್ದರೂ ಅವನು ಕುಡಿದ ಮತ್ತಿನಲ್ಲಿ ತನ್ನ ಸ್ನೇಹಿತನಿಗೆ ಅನ್ಯಾಯ ಮಾಡುವುದಕ್ಕೆ ಹೇಸುವುದಿಲ್ಲ. ಆದ್ದರಿಂದ ಕುಡುಕ ಸ್ನೇಹಿತನೊಂದಿಗೆ ಎಚ್ಚರಿಕೆಯಿಂದಿರಬೇಕು. ಅಂಥವರ ಸ್ನೇಹ ಮಾಡಬಾರದು ಎಂಬುದು ಈ ಗಾದೆಯ ಹೇಳಿಕೆ. ಹಾಗೆಯೇ ಜೂಜುಕೋರ ಸತ್ಯವಂತನಲ್ಲ ಎಂಬಲ್ಲಿ ಜೂಜುಕೋರರು ಸಾಮಾನ್ಯವಾಗಿ ಸತ್ಯವಂತರಾಗಿರುವುದಿಲ್ಲ ಎಂದು ಹೇಳಲಾಗಿದೆ. ಏಕೆಂದರೆ ಜೂಜಾಟದಲ್ಲಿ ಸತ್ಯಸಂಧನಾಗಿ ವರ್ತಿಸಿದರೆ ಅವನು ಗೆಲ್ಲುವುದಕ್ಕಾಗುವುದಿಲ್ಲ. ಸಮಯ ಸಂದರ್ಭಗಳಲ್ಲಿ ಅವನು ಮೋಸದಿಂದ ಗೆಲ್ಲಬೇಕಾಗುತ್ತದೆ. ಆದ್ದರಿಂದ ಜೂಜುಕೋರನು ಸಾಮಾನ್ಯವಾಗಿ ಮೋಸವನ್ನು ರೂಢಿಸಿಕೊಂಡಿರುತ್ತಾನೆ ಎನ್ನುವುದು ಈ ಗಾದೆಯ ತಾತ್ಪರ್ಯ. ಸತ್ಯಸಂಧನಾದ ಧರ್ಮರಾಯ ಶಕುನಿಯ ಕುತಂತ್ರದ ಜೂಜಾಟದಲ್ಲಿ ಸೋತು ಹೋಗುತ್ತಾನೆ. ಅಂದರೆ ಸತ್ಯವಂತರಿಗೆ ಜೂಜಾಟ ಕಷ್ಟವನ್ನು ತರುತ್ತದೆ ಎಂಬುದು ಈ ಗಾದೆಯ ಸಾರಾಂಶ.

## ೧೦. ಕಳ್ಳತನ ಕುರಿತ ಗಾದೆಗಳು

### 1. "ಕಳ್ಳನ ಮನಸ್ಸು ಹುಳ್ಳುಳ್ಳಗೆ"

ಕಳ್ಳತನ ಮಾಡಿದವನು ತನ್ನ ಕಳ್ಳತನ ಯಾರಿಗಾದರೂ ತಿಳಿದು ಬಿಡುತ್ತದೇನೋ ಎಂಬ ಆತಂಕದಲ್ಲಿರುತ್ತಾನೆ. ಅವರು ಬೇರೆಯವರಂತೆ ನಿರಾಳನಾಗಿರಲಾರ. ಯಾವುದೇ ತಪ್ಪು ಮಾಡಿದ ವ್ಯಕ್ತಿಯ ಮನಃಸ್ಥಿತಿಯೂ ಇದೇ ಆಗಿರುತ್ತದೆ. ತಾನು ಮಾಡಿದ ತಪ್ಪು ಬೇರೆಯವರಿಗೆ ತಿಳಿಯದಿದ್ದರೂ, ತನ್ನ ಮನಸ್ಸು 'ನೀನು ಮಾಡಿರುವುದು ತಪ್ಪು ಎಂದು ಕ್ಷಣಕ್ಷಣಕ್ಕೂ ಎಚ್ಚರಿಸುತ್ತಿರುತ್ತದೆ ಇದು ಈ ಗಾದೆಯ ಅಂತರಾರ್ಥ.

**2. "ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡನಂತೆ"**

ಇದು ಬಹಳ ಪ್ರಿಯವಾದ ಗಾದೆ. ಬೇರೆಯವರು ಮಾಡಿದ ತಪ್ಪನ್ನು ನಾವು ಪರೋಕ್ಷವಾಗಿ ಟೀಕಿಸಿದಾಗ, ತಪ್ಪು ಮಾಡದ ವ್ಯಕ್ತಿ ವಿಲವಿಲ ಒದ್ದಾಡುತ್ತಾನೆ. ತಾನು ಮಾಡಿದ ತಪ್ಪು ಬೇರೆಯವರಿಗೆ ತಿಳಿದಿದೆ ಎಂದು ಗಾಬರಿಯಾಗುತ್ತಾನೆ. ಹಾಗಾಗಿ ತಪ್ಪು ಮಾಡಿದ ವ್ಯಕ್ತಿ ಬೇರೆಯವರಿಂದ ಗುರುತಿಸಲ್ಪಟ್ಟು ಅವಹೇಳನಕ್ಕೆ ಗುರಿಯಾಗುತ್ತಾನೆ. ಇದೇ ಈ ಗಾದೆಯ ಅಂತರಾರ್ಥ.

**3. "ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ"**

ಇಲ್ಲಿ ಕಳ್ಳತನದ ಪರಿಣಾಮವನ್ನು ತಿಳಿಸಿದೆ. ಕಳ್ಳತನ ಎಂದಿದ್ದರೂ ಕೆಟ್ಟದ್ದು. ಒಂದಲ್ಲ ಒಂದು ದಿನ ತಾನು ಮಾಡಿದ ಕಳ್ಳತನ ಬಯಲಾಗುತ್ತದೆ. ಕಳ್ಳ ಸಿಕ್ಕಿಬೀಳುತ್ತಾನೆ ಹಾಗೂ ಜೈಲು ಸೇರುತ್ತಾನೆ. ಅಷ್ಟೇ ಅಲ್ಲ ಕಳ್ಳ ಬೇರೆಯವರಿಂದ ಏಟು ತಿಂದು ಸಾಯಲೂಬಹುದು. ಆಗ ಕಳ್ಳನ ಹೆಂಡತಿ ವಿಧವೆಯಾಗುತ್ತಾಳೆ. ಆದ್ದರಿಂದ ಕಳ್ಳನ ಹೆಂಡತಿಯನ್ನು ಯಾರೂ ಗೌರವಿಸುವುದಿಲ್ಲ. ಎಲ್ಲ ಭ್ರಷ್ಟರ ಹಣೆಬರಹವೂ ಒಂದಲ್ಲ ಒಂದು ದಿನ ಇದೇ ಆಗಿರುತ್ತದೆ ಎಂಬುದೇ ಈ ಗಾದೆಯ ಸಾರಾಂಶ.

**4. "ಕಳ್ಳನಿಗೊಂದು ಪಿಳ್ಳೆ ನೆವ ; ಮಳ್ಳಿಗೊಂದು ಮಗುವಿನ ನೆವ"**

ಕಳ್ಳನು ಏನಾದರೂ ಒಂದು ಕಾರಣ ಹೇಳಿ ಕಳ್ಳತನ ನಡೆದ ಜಾಗದಿಂದ ಪರಾರಿಯಾಗುತ್ತಾನೆ. ಅದೇ ರೀತಿ ಹೆಂಗಸೊಬ್ಬಳು ತನ್ನ ಮಗು ಅಳುತ್ತಿದೆ ಎಂದು ಕಾರಣ ಹೇಳಿ ಕೆಲಸದಿಂದ ತಪ್ಪಿಸಿಕೊಂಡು ಹೋಗುತ್ತಾಳೆ. ಅವಳಿಗೆ ಕೆಲಸ ಮಾಡುವ ಮನಸ್ಸಿರುವುದಿಲ್ಲ. ಅದಕ್ಕೊಂದು ನೆಪಬೇಕು. ಆ ನೆಪ ತನ್ನ ಮಗುವಿನ ರೂಪದಲ್ಲಿ ಸಿಗುತ್ತದೆ. ಕೆಲಸ ಮಾಡದ ಸೋಮಾರಿಗಳನ್ನು ಕುರಿತು ಈ ಗಾದೆ ಹೇಳಲಾಗಿದೆ. ಸೋಮಾರಿಗಳಿಗೆ ಕೆಲಸ ಮಾಡದಿರುವುದಕ್ಕೆ ನೂರಾರು ಕಾರಣಗಳು ಸಿಗುತ್ತವೆ. ಅಂಥ ಕಾರಣಗಳನ್ನು ಅವರು ಸೃಷ್ಟಿಸಿಕೊಳ್ಳುತ್ತಾರೆ.

**5. "ತಾನು ಕಳ್ಳ ಪರರ ನಂಬ"**

ಕಳ್ಳನಾದವನು ತಾನು ಕಳ್ಳತನ ಮಾಡುತ್ತಿದ್ದರೂ ಬೇರೆಯವರನ್ನು ನಂಬುವುದಿಲ್ಲ. ಏಕೆಂದರೆ ಬೇರೆಯವರೂ ತನ್ನ ಹಾಗೆಯೇ ಕಳ್ಳರಿರಬಹುದು

ಎಂಬ ಅನುಮಾನ ಅವನದಾಗಿರುತ್ತದೆ. ಆದ್ದರಿಂದ ಪ್ರಾಮಾಣಿಕ ವ್ಯಕ್ತಿಗಳು ಬೇರೆಯವರನ್ನೂ ನಂಬುತ್ತಾರೆ.

**6. "ಸಂತೆಗೆ ಮುಂಚೆ ಗಂಟು ಕಳ್ಳರು ನೆರೆದರು"**

ಸಂತೆ ಇನ್ನೂ ಸೇರುವುದಕ್ಕೆ ಮೊದಲೇ ಕಳ್ಳರು ಜಮಾವಣೆಯಾಗಿರುತ್ತಾರೆ. ಯಾವ್ಯಾವ ರೀತಿ ಕದಿಯಬೇಕು ? ಎಲ್ಲೆಲ್ಲಿ ಕದಿಯಬೇಕು ಎಂದು ಹಂಚಿಕೆ ಹಾಕುತ್ತಿರುತ್ತಾರೆ. ಅಂದರೆ ಬೇರೆಯವರು ಕಷ್ಟಪಟ್ಟು ದುಡಿಯುತ್ತಿದ್ದರೆ ಅವರಿಗೆ ಬರುವ ಪ್ರತಿಫಲವನ್ನು ಕಬಳಿಸುವುದಕ್ಕೆ ಕೆಲವರು ಕಾದಿರುತ್ತಾರೆ.

## ೧೧. ಸತ್ಯ-ಅಸತ್ಯ, ಧರ್ಮ-ಅಧರ್ಮ ಕುರಿತ ಗಾದೆಗಳು

**1. "ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು"**

ಈ ಗಾದೆ ಒಬ್ಬ ವ್ಯಕ್ತಿಯ ದುರದೃಷ್ಟವನ್ನು ಕುರಿತು ಹೇಳುತ್ತದೆ. ಒಬ್ಬ ವ್ಯಕ್ತಿ ಏನೇ ಕೆಲಸ ಕೈಗೊಂಡರೂ ಯಶಸ್ವಿಯಾಗದೇ ಪದೇ ಪದೇ ಸೋಲನ್ನನುಭವಿಸುತ್ತಾನೆ. ಅಂಥ ಸಂದರ್ಭದಲ್ಲಿ ಈ ಗಾದೆಯನ್ನು ಬಳಸುತ್ತಾರೆ. ಸಮುದ್ರ ಆಳವಾಗಿರುತ್ತದೆ. ಆದರೆ ದುರದೃಷ್ಟವಂತ ಅಲ್ಲಿಯೂ ಮುಳುಗುವುದಿಲ್ಲ. ಅಂದರೆ ಅವನಿಗೆ ಎಲ್ಲಿ ಹೋದರೂ ಸೋಲೇ ಕಾದಿರುತ್ತದೆ ಎನ್ನುವ ಅರ್ಥ. ಪಾಪಿ, ಸಮುದ್ರ, ಮೊಳಕಾಲು, ನೀರು ಈ ಪದಗಳ ಜೋಡಣೆ ಹಳ್ಳಿಗನ ಬುದ್ಧಿವಂತಿಕೆಗೆ ನಿದರ್ಶನ.

**2. "ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ"**

ಈ ಗಾದೆಯೂ ಸಹ ದುರದೃಷ್ಟಶಾಲಿಗಳನ್ನು ಕುರಿತ ಗಾದೆಯಾಗಿದೆ. ಮಹಾಭಾರತದಲ್ಲಿ ಕುಂತಿಯ ಮಕ್ಕಳಾದ ಪಾಂಡವರು ಕಡೆಯವರೆಗೂ ಕಷ್ಟವನ್ನೇ ಅನುಭವಿಸುತ್ತಾರೆ. ಕಡೆಗೆ ರಾಜ್ಯ ಸಿಕ್ಕಿದ ಮೇಲೂ ಅವರು ಸುಖವಾಗಿದ್ದರೆಂದು ಹೇಳುವುದಕ್ಕಾಗುವುದಿಲ್ಲ. ಕಡೆಗೆ ಅವರು ಸ್ವರ್ಗಾರೋಹಣ ಪರ್ವದಲ್ಲಿ ರಾಜಕಾರಣದಿಂದ ಬೇಸತ್ತು ಸ್ವರ್ಗಾಭಿಮುಖವಾಗಿ ಹೊರಟು ಹೋಗುತ್ತಾರೆ. ಆದರೆ ಅನ್ಯಾಯಗಳನ್ನು ಮಾಡುತ್ತ ರಾಜ್ಯಭಾರ ಮಾಡುತ್ತಿದ್ದ ಕೌರವರಾದರೋ ಯುದ್ಧದಲ್ಲಿ ಹತರಾದರೂ ಕೂಡ ಸಾಯುವವರೆಗೂ ಸುಖವಾಗಿಯೇ ಬಾಳಿದರು. ಈ ಅರ್ಥದಲ್ಲಿ ಈ ಗಾದೆ ಪೌರಾಣಿಕ ಸನ್ನಿವೇಶವೊಂದನ್ನು ಲೌಕಿಕಕ್ಕೆ ಅನ್ವಯಿಸಿ ಸೊಗಸಾಗಿ ಹೇಳಲಾಗಿದೆ.

**3. "ಹಾಲುಂಡ ಮಕ್ಕಳೇ ಬದುಕುವುದಿಲ್ಲ, ಇನ್ನು ವಿಷ ಕುಡಿದ ಮಕ್ಕಳು ಬದುಕುತ್ತಾವೆಯೇ ?**

ಒಳ್ಳೆಯ ಕೆಲಸ ಮಾಡಿದವರಿಗೇ ಕಷ್ಟಗಳು ಬರುತ್ತವೆ. ಹಾಗಿರುವಾಗ ಕೆಟ್ಟ ಕೆಲಸಗಳನ್ನು ಮಾಡಿದವರಿಗೆ ಕಷ್ಟಗಳು ಬರದೆ ಇರುತ್ತವೆಯೇ ? ಬಂದೇ ಬರುತ್ತವೆ ಎಂಬುದು ಇದರ ಭಾವ. ಆದ್ದರಿಂದ ಜನರು ಒಳ್ಳೆಯವರಾಗಿ ಬಾಳಬೇಕು ಎಂಬುದು ಈ ಗಾದೆಯ ಸಂದೇಶ.

**4. ಬೇವಿನ ಬೀಜ ಬಿತ್ತಿ ಮಾವಿನಹಣ್ಣು ಬೆಳೆಯುವುದಕ್ಕಾಗುತ್ತದೆಯೇ ?**

ಕೆಟ್ಟ ಕೆಲಸಗಳನ್ನು ಮಾಡಿ ಒಳ್ಳೆಯ ಫಲಗಳನ್ನು ಪಡೆಯಲು ಸಾಧ್ಯವೇ ? ಖಂಡಿತ ಸಾಧ್ಯವಿಲ್ಲ ಎಂಬುದೇ ಈ ಗಾದೆಯ ಸಾರಾಂಶ. ಕೆಟ್ಟ ಕೆಲಸ ಮಾಡಿದವ ಕೆಟ್ಟ ಫಲಗಳನ್ನು ಪಡೆಯುತ್ತಾನೆ. ಒಳ್ಳೆಯ ಕೆಲಸಗಳನ್ನು ಮಾಡಿದವನು ಒಳ್ಳೆಯ ಫಲಗಳನ್ನು ಪಡೆಯುತ್ತಾನೆ. ಇದರಲ್ಲಿ ಅನುಮಾನವೇ ಇಲ್ಲ. ಆದ್ದರಿಂದ ಜನರು ಒಳ್ಳೆಯ ಕೆಲಸಗಳಲ್ಲಿ ನಿರತರಾಗಿ ಒಳ್ಳೆಯ ಫಲಗಳನ್ನು ಪಡೆಯಬೇಕೆಂಬುದೇ ಈ ಗಾದೆಯ ಆಶಯ.

**5. "ಬಿತ್ತಿದಂತೆ ಬೆಳೆ"**

ಈ ಗಾದೆಯಲ್ಲೂ ಸಹ ಒಳ್ಳೆಯ ಕೆಲಸ, ಕೆಟ್ಟ ಕೆಲಸಗಳ ಫಲವನ್ನು ತಿಳಿಸಲಾಗಿದೆ. "ಬಿತ್ತಿದಂತೆ ಬೆಳೆ" ಅಂದರೆ ನಾವು ಯಾವ ಬೀಜವನ್ನು ಭೂಮಿಯಲ್ಲಿ ಬಿತ್ತುತ್ತೇವೆಯೋ ಆ ಬೆಳೆಯನ್ನೇ ಬೆಳೆದುಕೊಳ್ಳುತ್ತೇವೆ. ನಾವು ಭೂಮಿಯಲ್ಲಿ ಮುಳ್ಳಿನ ಬೀಜವನ್ನು ಬಿತ್ತಿದರೆ ಮುಳ್ಳಿನ ಗಿಡಗಳನ್ನು ಬೆಳೆಯುತ್ತೇವೆ. ಅದೇ ಮಾವಿನ ಬೀಜಗಳನ್ನು ಬಿತ್ತಿದರೆ ಮಾವಿನ ಹಣ್ಣುಗಳನ್ನು ಪಡೆದುಕೊಳ್ಳುತ್ತೇವೆ. ನಾವು ಮಾಡುವ ಕಾರ್ಯಗಳ ಮೇಲೆಯೇ ಫಲಗಳು ನಿರ್ಧಾರವಾಗುತ್ತವೆ. ಆದ್ದರಿಂದ ಒಳ್ಳೆಯ ಕೆಲಸಗಳನ್ನು ಮಾಡಿ ಒಳ್ಳೆಯ ಫಲಗಳನ್ನು ಪಡೆಯಬೇಕೆಂಬುದೇ ಈ ಗಾದೆಯ ಆಶಯ.

**6. "ಮಾಡಬಾರದ್ದು ಮಾಡಿದರೆ ಆಗಬಾರದ್ದು ಆಗುತ್ತದೆ".**

ಈ ಗಾದೆಯಲ್ಲಿ ಕೆಟ್ಟ ಕೆಲಸ ಮಾಡಿದವನು ಕೆಟ್ಟ ಫಲಗಳನ್ನು ಪಡೆಯುತ್ತಾನೆ ಎಂಬ ಸೂಚನೆ ಇದೆ. ಏಕೆಂದರೆ ಮಾಡಬಾರದ ಕೆಲಸಗಳನ್ನು ಮಾಡಿದರೆ ಆಗಬಾರದ ಅನರ್ಥ ಪರಂಪರೆಗಳು ಸಂಭವಿಸುತ್ತವೆ. ಇದು ಸಾರ್ವಕಾಲಿಕ ಸತ್ಯವಾಗಿದೆ ಎಂಬುದನ್ನು ಈ ಗಾದೆ ತಿಳಿಸಿಕೊಡುತ್ತದೆ.

### 7. "ಮಾಡಿದ್ದುಣ್ಣೋ ಮಹಾರಾಯ"

ಈ ಗಾದೆಯೂ ಸಹ ತಾನು ಮಾಡಿದ ಕರ್ಮಗಳ ಫಲವನ್ನು ತಾನೇ ಅನುಭವಿಸಬೇಕು. ಬೇರೆ ಯಾರೂ ಅದರ ಫಲಗಳನ್ನು ಅನುಭವಿಸಲಾರರು ಎಂಬುದನ್ನು ಹೇಳುತ್ತದೆ. ಒಳ್ಳೆಯ ಕರ್ಮಗಳನ್ನು ಮಾಡಿದವರಿಗೆ ಒಳ್ಳೆಯ ಫಲಗಳು, ಕೆಟ್ಟ ಕರ್ಮಗಳನ್ನು ಮಾಡಿದವರಿಗೆ ಕೆಟ್ಟ ಫಲಗಳು ಉಂಟಾಗುವುದು ಖಚಿತ ಎಂಬುದನ್ನು ಈ ಗಾದೆ ತಿಳಿಸಿ ಹೇಳುತ್ತದೆ. ಆದ್ದರಿಂದ ಜನರು ಯಾವುದೇ ಕೆಲಸ ಮಾಡಬೇಕಾದರೂ ಇದರ ಪರಿಣಾಮವೇನಾಗುತ್ತದೆ ಎಂದು ಯೋಚನೆ ಮಾಡಬೇಕು. ಮಾಡಿದ ಮೇಲೆ ಪಶ್ಚಾತ್ತಾಪ ಪಟ್ಟರೆ ಏನೂ ಪ್ರಯೋಜನವಿಲ್ಲ. ತಾನು ಮಾಡಿದ ಕರ್ಮಗಳ ಫಲವನ್ನು ತಾನು ಅನುಭವಿಸಿಯೇ ತೀರಬೇಕು. ಇದರಿಂದ ಯಾರೂ ತಪ್ಪಿಸಿಕೊಳ್ಳಲಾರರು ಎಂಬುದನ್ನು ಈ ಗಾದೆ ಒತ್ತಿ ಹೇಳುತ್ತದೆ.

## ೧೨. ಅಸಾಧ್ಯ ಎಂಬ ಅರ್ಥದ ಗಾದೆಗಳು

### 1. "ಗುಡ್ಡಕ್ಕೆ ಹಚ್ಚಡ ಹೊದ್ದಿಸಿದ ಹಾಗೆ"

ಇಲ್ಲಿ 'ಹಚ್ಚಡ' ಎಂದರೆ ಹೊದಿಕೆ, ದುಪಟಿ ಎಂದಾಗುತ್ತದೆ. ಗುಡ್ಡದಂತಹ ವಿಶಾಲವಾದ ಪರಿಸರವನ್ನು ದುಪಟಿಯಿಂದ ಮುಚ್ಚುವುದಕ್ಕಾಗುವುದೆ ? ಎಂದರೆ ಅಸಾಧ್ಯ ಎಂದು ಅರ್ಥ. ಇದೇ ರೀತಿ ಮತ್ತೊಂದು ಗಾದೆಯಿದೆ.

### 2. "ಅಟ್ಟ ಹತ್ತದವನು ಬೆಟ್ಟ ಹತ್ತುತ್ತಾನೆಯೇ ?"

ಅಟ್ಟ ಹತ್ತುವುದು ಸುಲಭ. ಇಂಥ ಅಟ್ಟವನ್ನೇ ಹತ್ತದವನು ಬೆಟ್ಟವನ್ನು ಹತ್ತುತ್ತಾನೆಯೇ ? ಅದೇ ರೀತಿ ಸಣ್ಣ ಕೆಲಸಗಳನ್ನೇ ಮಾಡದವನು ದೊಡ್ಡ ಕೆಲಸಗಳನ್ನು ಮಾಡಲು ಸಾಧ್ಯವೇ ? ಸಾಧ್ಯವಿಲ್ಲವೆಂದೇ ಈ ಗಾದೆಯ ಆಶಯ.

## ೧೩. ಶಿಕ್ಷೆ ಕುರಿತ ಗಾದೆ

### 1. "ದಂಡಂ ದಶಗುಣಂ ಭವೇತ್"

ತಪ್ಪು ದಾರಿಯಲ್ಲಿ ಹೋಗುವವನನ್ನು ತಿದ್ದಲು ಸಾಮ, ದಾನ, ಬೇಧ, ದಂಡ ಎಂಬ ಮಾರ್ಗಗಳಿವೆ. ಯಾವ ಮಾರ್ಗಗಳಿಂದಲೂ ಅವನನ್ನು

ತಿದ್ದಲಾಗದಿದ್ದರೆ, ಕೊನೆಯ ಮಾರ್ಗವಾದ ದಂಡವನ್ನೇ ತೆಗೆದುಕೊಳ್ಳಬೇಕಾಗುತ್ತದೆ. ದಂಡ ತೆಗೆದುಕೊಂಡ ತಕ್ಷಣ ತಪ್ಪು ಮಾಡಿದ ವ್ಯಕ್ತಿಯಲ್ಲಿ ಹತ್ತು ಗುಣಗಳೂ ಬಂದು ಬಿಡುತ್ತದೆ ಎಂಬುದೇ ಈ ಗಾದೆಯ ಅರ್ಥ.

## ಅನ್ಯೋಕ್ತಿ ಗಾದೆಗಳು

**1. "ಮಂಚಕ್ಕೆ ಎಷ್ಟು ಕಾಲು ಎಂದರೆ ಮೂರು ಮತ್ತೊಂದು ಎಂದಳಂತೆ"**

ಇಲ್ಲಿ ಮಂಚಕ್ಕೆ ನಾಲ್ಕು ಕಾಲುಗಳಿವೆ. ಆದರೆ ಒಬ್ಬಳು ಉತ್ತರ ಹೇಳುವಾಗ ಮೂರು ಕಾಲು ಮತ್ತು ಮತ್ತೊಂದು ಕಾಲು ಎಂದು ಹೇಳುತ್ತಾಳೆ. ನಾಲ್ಕು ಕಾಲುಗಳು ಎಂದು ಹೇಳುವುದನ್ನು ಈ ರೀತಿ ಹೇಳುತ್ತಾಳೆ. ಅಂದರೆ ಯಾವುದೇ ಒಂದು ಸಂದರ್ಭವನ್ನು ವಿವರಿಸುವಾಗ ಅದೇ ಅರ್ಥ ಬರುವ ಹಾಗೆ ಬೇರೊಂದು ರೀತಿಯಲ್ಲಿ ಕೆಲವರು ಹೇಳುತ್ತಾರೆ. ಅಂಥ ಸಂದರ್ಭದಲ್ಲಿ ಈ ಗಾದೆ ಹೇಳುತ್ತಾರೆ.

**2. "ಅಳಿಯ ಅಲ್ಲ ಮಗಳ ಗಂಡ"**

ಇಲ್ಲಿಯೂ ಸಹ ಅಳಿಯ ಎಂದು ಹೇಳುವುದಕ್ಕೆ ಬದಲಾಗಿ ಮಗಳ ಗಂಡ ಎಂದು ಹೇಳುತ್ತಾರೆ. ಅರ್ಥ ಒಂದೇ ಆದರೆ ಹೇಳಿಕೆ ಭಿನ್ನವಾಗಿದೆ. ಇಲ್ಲೆಲ್ಲ ಕನ್ನಡಿಗರ ಚಾತುರ್ಯವನ್ನು ಅರಿಯಬಹುದಾಗಿದೆ.

## ೧೪. ಹಣದ ಮಹತ್ವ ಕುರಿತ ಗಾದೆಗಳು

**1. "ದುಡ್ಡಿದ್ದವನೇ ದೊಡ್ಡಪ್ಪ"**

ಈ ಗಾದೆ ಐಶ್ವರ್ಯವಂತರನ್ನು ಕುರಿತದ್ದಾಗಿದೆ. ಹಣ ಉಳ್ಳವನೇ ದೊಡ್ಡ ವ್ಯಕ್ತಿ. ಸಮಾಜದಲ್ಲಿ ಅವನಿಗೇ ಬೆಲೆ, ಗೌರವ. ಆದ್ದರಿಂದ ಜನ ಹೇಗಾದರೂ ಮಾಡಿ ಹಣ ಗಳಿಸಲು ಯತ್ನಿಸುತ್ತಾರೆ. ಹಣದಿಂದ ಎಲ್ಲಾ ಅನುಕೂಲಗಳನ್ನು ಮಾಡಿಕೊಂಡು ಸುಖವಾಗಿರಬಹುದು ಎಂಬುದು ಜನಗಳ ನಂಬಿಕೆ. ಆದರೆ ಹಣ ಒಂದೇ ಸರ್ವಸ್ವವಲ್ಲ. ಈ ಹಣವನ್ನು ಧರ್ಮ ಮಾರ್ಗದಿಂದ ಗಳಿಸಬೇಕೆಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಹಾಗಲ್ಲದೆ ಅನ್ಯಾಯದ ಮಾರ್ಗಗಳಿಂದ ಹಣ ಗಳಿಸುತ್ತ ಹೋದರೆ ಸಮಾಜದ ಆರೋಗ್ಯ ಕೆಟ್ಟು ಹೋಗುತ್ತದೆ. ಜನರ ನೈತಿಕ ಮಟ್ಟ ಕುಸಿಯುತ್ತದೆ. ಅನಾಚಾರ–ಅತ್ಯಾಚಾರಗಳು ತಾಂಡವವಾಡುತ್ತವೆ.

**2. "ಕಾಸಿದ್ರೆ ಕೈಲಾಸ"**

ಈ ಗಾದೆಯೂ ಸಹ ಹಣದ ಮಹತ್ವವನ್ನು ಹೇಳುತ್ತದೆ. ಹಣವಿದ್ದರೆ ತನಗೆ ಬೇಕಾದುದೆಲ್ಲವನ್ನು ಪಡೆದುಕೊಂಡು ಸುಖವಾಗಿರಬಹುದೆಂಬುದೇ ಈ ಗಾದೆಯ ಆಶಯ. ಹಣವಿಲ್ಲದಿದ್ದರೆ ಜೀವನವೇ ಕಷ್ಟವಾಗುತ್ತದೆ. ಆದ್ದರಿಂದಲೇ ಕಷ್ಟಪಟ್ಟು ಹಣ ಸಂಪಾದನೆ ಮಾಡಬೇಕು. ಆದ್ದರಿಂದಲೇ 'ಸೋಮಾರಿಗೆ ಬದುಕೇ ಭಾರ' ಎಂಬ ಗಾದೆ ಬಳಕೆಗೆ ಬಂದಿದೆ.

**2. "ಹಣವಿಲ್ಲದವನು ಹೆಣಕ್ಕೆ ಸಮಾನ"**

ಈ ಗಾದೆಯೂ ಸಹ ಹಣದ ಮಹತ್ವವನ್ನು ತಿಳಿಸುತ್ತದೆ. ಹಣವಿಲ್ಲದವನು ಹೆಣಕ್ಕೆ ಸಮಾನ ಅಂದರೆ ಅವನು ಬದುಕಿದ್ದೂ ವ್ಯರ್ಥ. ಹಣವಿಲ್ಲದಿದ್ದರೆ ಈ ಪ್ರಪಂಚದಲ್ಲಿ ಬದುಕುವುದಕ್ಕಾಗುವುದಿಲ್ಲ. ಹಣ ಸಂಪಾದನೆಗಾಗಿ ಮನುಷ್ಯ ಕಷ್ಟಪಟ್ಟು ಕೆಲಸ ಮಾಡಬೇಕು. ಧರ್ಮಮಾರ್ಗದಲ್ಲಿ ದ್ರವ್ಯಾರ್ಜನೆ ಮಾಡಬೇಕು.

**4. "ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದನಂತೆ"**

ಇವನು ಹಣದ ಮುಖವನ್ನೇ ನೋಡಿರಲಿಲ್ಲ. ಇದ್ದಕ್ಕಿದ್ದಂತೆ ಶ್ರೀಮಂತನಾದ. ಆಗ ನೋಡಬೇಕು ಇವನ ದರ್ಬಾರು ! ಬಿಸಿಲು-ಮಳೆಯಿಲ್ಲದ ಅರ್ಧರಾತ್ರಿಯಲ್ಲೂ ಕೊಡೆ ಹಿಡಿದುಕೊಂಡು ರಸ್ತೆಯಲ್ಲಿ ನಡೆದ !

## ೧೫. ಜಿಪುಣತನ ಕುರಿತ ಗಾದೆಗಳು

**1. "ಜೀನನ ಒಡವೆ ಜಾಣ ತಿಂದ"**

ಇಲ್ಲಿ ಜಿಪುಣನಾದ ಒಬ್ಬ ವ್ಯಕ್ತಿ ತನ್ನ ಜೀವಮಾನವಿಡೀ ದುಡಿದು ದುಡಿದು ಹಣ ಕೂಡಿಡುತ್ತಾನೆ. ಆದರೆ ತನ್ನ ಸ್ವಂತ ಸುಖಕ್ಕಾಗಿ ಸ್ವಲ್ಪವೂ ಖರ್ಚು ಮಾಡುವುದಿಲ್ಲ. ಇಂಥವರ ಹಣವನ್ನು ಜಾಣರಾದ ವ್ಯಕ್ತಿಗಳು ಉಪಯೋಗಿಸಿಕೊಂಡು ಸುಖ ಪಡುತ್ತಾರೆ. ಇಂಥ ಜಿಪುಣರನ್ನು ಕುರಿತೇ ಈ ಗಾದೆ ಸೃಷ್ಟಿಯಾಗಿದೆ. ಅಂದರೆ ಮನುಷ್ಯ ದುಂದು ವೆಚ್ಚ ಮಾಡಬೇಕೆಂದು ಇದರ ಅರ್ಥವಲ್ಲ. ತಾನು ದುಡಿದ ಹಣದಲ್ಲಿ ತಾನೂ ಸುಖವಾಗಿದ್ದು ತನ್ನ ಮಕ್ಕಳು ಮರಿಗಳಿಗೂ ಸಾಕಷ್ಟು ಉಳಿಸಿ ಹೋಗಬೇಕು ಎಂಬುದು ಈ ಗಾದೆಯ ಆಶಯ.

**2."ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ"**

ನೆಂಟರು ತನ್ನ ಮನೆಗೆ ಬರುತ್ತಿರಬೇಕು. ಆದರೆ ಅಕ್ಕಿ ಖರ್ಚಾಗಬಾರದು ಎಂದು ಕೆಲವರು ಅಂದುಕೊಳ್ಳುತ್ತಾರೆ. ಇದು ಜಿಪುಣತನದ ಲಕ್ಷಣ.

**3. "ಅಕ್ಕಿ ಖರ್ಚಾಗಕೂಡದು, ಮಕ್ಕಳು ಬಡವಾಗಕೂಡದು"**

ಇಲ್ಲಿ ಮಕ್ಕಳು ಆರೋಗ್ಯವಾಗಿ ಚೆನ್ನಾಗಿರಬೇಕು. ಆದರೆ ಅಕ್ಕಿ ಖರ್ಚಾಗಬಾರದು ಎಂದು ಕೆಲವು ಜಿಪುಣರು ಭಾವಿಸುತ್ತಾರೆ. ಆದರೆ ಇದು ಸಾಧ್ಯವಿಲ್ಲದ ಸಂಗತಿ. ಚೆನ್ನಾಗಿ ಊಟ ಮಾಡಿದರೆ ಮಕ್ಕಳು ಆರೋಗ್ಯವಾಗಿರುತ್ತಾರೆ. ಆಗ ಅಕ್ಕಿ ಖರ್ಚು ಜಾಸ್ತಿ ಬಂದೇ ಬರುತ್ತದೆ.

**4. "ಮಾಡುವುದು ಗಡದ್ದು ವ್ಯಾಪಾರ, ಉಪ್ಪಿಗೆ ಬಡತನ"**

ಕೆಲವರು ಶ್ರೀಮಂತರಿರುತ್ತಾರೆ. ಅವರಿಗೆ ಬೇಕಾದಷ್ಟು ಆದಾಯವಿರುತ್ತದೆ. ಆದರೆ ಅವರು ಅಗತ್ಯವಾಗಿ ಮಾಡಬೇಕಾದ ಕೆಲಸಗಳಿಗೂ ಹಣ ಖರ್ಚು ಮಾಡಲು ಹಿಂದೇಟು ಹಾಕುತ್ತಾರೆ. ಮಾಡಬಾರದ ಕೆಲಸಗಳಿಗೆ ಮಾತ್ರ ವಿಪರೀತ ಹಣ ಖರ್ಚು ಮಾಡುತ್ತಾರೆ. ಅಂಥವರನ್ನು ಕುರಿತೇ ಈ ಗಾದೆ ಪ್ರಸ್ತಾಪಿಸಿದೆ.

## ೧೬. ಮಾತು ಕುರಿತ ಗಾದೆಗಳು

**1. "ಬಾಯಿ ಜೋರಾಗಿರುವವನು ಬರಗಾಲದಲ್ಲೂ ಬದುಕಿದನಂತೆ"**

ಇವನಿಗೆ ಮಾತೇ ಬಂಡವಾಳ. ಎಂಥ ಬರಗಾಲದಲ್ಲೂ ಇವನು ಮಾತುಗಾರಿಕೆಯಿಂದಲೇ ಆಹಾರ ದೊರಕಿಸಿಕೊಂಡು ಬಿಡುತ್ತಾನೆ. ಆದ್ದರಿಂದಲೇ ಮಾತುಗಾರಿಕೆ ಇಲ್ಲಿ ಪ್ರಾಮುಖ್ಯ ಪಡೆದಿದೆ.

**2. "ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು"**

ಕೆಲಸಕ್ಕೆ ಬಾರದ ಬರಿಯ ಮಾತಿನಿಂದ ಏನು ಪ್ರಯೋಜನ ? ಅದರಿಂದ ಕೇಡೇ ಜಾಸ್ತಿ. ಅದೇ ರೀತಿ ತೂತು ಬಿದ್ದ ಪಾತ್ರೆಯಲ್ಲಿ ನೀರನ್ನು ತುಂಬಿ ಉರಿಯುತ್ತಿರುವ ಒಲೆಯ ಮೇಲಿಟ್ಟರೆ ಒಂದೊಂದೇ ಹನಿ ನೀರು ತೊಟ್ಟಿಕ್ಕಿ ಒಲೆ ಕ್ರಮೇಣ ಆರಿಹೋಗುತ್ತದೆ.

**3. "ಬಾಯಿ ಬಿಟ್ಟರೆ ಬಣ್ಣಗೇಡು"**

ಕೆಲವರು ಮಾತನಾಡದಿದ್ದರೇ ಮೇಲು. ಏಕೆಂದರೆ ಅವರು ಮಾತನಾಡ

ತೊಡಗಿದರೆ ಎಲ್ಲ ಗುಟ್ಟುಗಳನ್ನು ರಟ್ಟು ಮಾಡಿ, ತಾವೂ ನಗೆಪಾಟಲಿಗೆ ಈಡಾಗುತ್ತಾರೆ.

**4. "ಎಲುಬಿಲ್ಲದ ನಾಲಿಗೆ ಎತ್ತ ಬೇಕಾದರೂ ಹೊರಳುತ್ತೆ"**

ನಾಲಿಗೆಗೆ ಮೂಳೆಯಿಲ್ಲ. ಆದ್ದರಿಂದ ಅದು ಎತ್ತ ಬೇಕಾದರೂ ಹೊರಳುತ್ತೆ. ಹಾಗೆಂದು ಪದೇಪದೇ ಮಾತು ಬದಲಿಸುತ್ತಿದ್ದರೆ ಅವನನ್ನು ಯಾರು ನಂಬುತ್ತಾರೆ? ನಿಯತ್ತಿಲ್ಲದ ಮನುಷ್ಯ ಎಂದುಕೊಳ್ಳುತ್ತಾರೆ.

## ೧೭. ಸಂಕಟ ಕುರಿತ ಗಾದೆಗಳು

**1. "ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ"**

ಬೆಕ್ಕಿನ ಕೈ ಸಿಕ್ಕಿದ ಇಲಿಗೆ ಬೆಕ್ಕು ಯಾವಾಗ ತಿಂದುಬಿಡುತ್ತದೋ ಎಂಬ ಭಯ. ಆದರೆ ಬೆಕ್ಕಿಗೆ ಇಲಿ ಆಡುವುದನ್ನು ನೋಡಿ ಒಳಗೊಳಗೇ ಖುಷಿ.

**2. "ಸಂಕಟ ಬಂದಾಗ ವೆಂಕಟರಮಣ"**

ಕೆಲವರು ಸುಖದಲ್ಲಿರುವಾಗ ದೇವರನ್ನು ನೆನೆಯುವುದಿಲ್ಲ. ಕಷ್ಟ ಬಂದಾಗ ತಕ್ಷಣ ದೇವರನ್ನು ಸ್ಮರಿಸುತ್ತಾರೆ.

## ೧೮. ಆಸೆ ಕುರಿತ ಗಾದೆಗಳು

**1. (ಅ) "ಅತಿ ಆಸೆ ಗತಿಕೇಡು (ಆ) ದುರಾಸೆ ದುಃಖಕ್ಕೆ ಮೂಲ**

ಆಸೆ ಇರಬೇಕು, ಆದರೆ ದುರಾಸೆ ಇರಬಾರದು. ಏಕೆಂದರೆ ದುರಾಸೆಯಿಂದ ಅಂತ್ಯದಲ್ಲಿ ದುಃಖ ಉಂಟಾಗುತ್ತದೆ.

**2. "ಅಗ್ಗದ ಆಸೆ ಮುಗ್ಗಿದ ಜೋಳ"**

ಕಡಿಮೆ ಬೆಲೆಗೆ ಸಿಗುತ್ತದೆಂದು ಯಾರೋ ಒಬ್ಬರು ಮುಗ್ಗಿದ ಜೋಳವನ್ನು ತಂದು ರೊಟ್ಟಿ ಮಾಡಿಕೊಂಡು ತಿಂದು ಅನಾರೋಗ್ಯಕ್ಕೆ ಈಡಾದರಂತೆ.

## ೧೯. ಚಿಂತೆ ಕುರಿತ ಗಾದೆಗಳು

**1. ಮದುವೆಯಾಗದವನಿಗೆ ಮದುವೆ ಚಿಂತೆ, ಮದುವೆಯಾದವನಿಗೆ ನಾನಾ ಚಿಂತೆ.**

ಮದುವೆಯಾಗದಿದ್ದ ವ್ಯಕ್ತಿಗೆ ಯಾವಾಗಲೂ ಮದುವೆಯಾಗಬೇಕೆಂಬ ಒಂದೇ ಚಿಂತೆ ಕಾಡುತ್ತಿರುತ್ತದೆ. ಆದರೆ ಮದುವೆಯಾದ ಮೇಲೆ ಆ ವ್ಯಕ್ತಿಗೆ

ಹೆಂಡತಿ, ಮಕ್ಕಳನ್ನು ಸಾಕಬೇಕಾದ ಹೊಣೆಗಾರಿಕೆಯಿಂದಾಗಿ, ಅದಕ್ಕೆ ದುಡ್ಡು ಸಂಪಾದಿಸಲು ಹೋಗಿ ನಾನಾ ಚಿಂತೆಗಳಿಗೆ ಈಡಾಗುತ್ತಾನೆ.

**2. "ಮಕ್ಕಳಾಗದವನಿಗೆ ಮಕ್ಕಳ ಚಿಂತೆ, ಮಕ್ಕಳಾದವರಿಗೆ ನಾನಾ ಚಿಂತೆ"**

ಮಕ್ಕಳಿಲ್ಲದ ದಂಪತಿಗಳಿಗೆ ನಮಗೆ ಮಕ್ಕಳಿಲ್ಲವಲ್ಲ ಎಂಬ ಒಂದೇ ಚಿಂತೆ ಕಾಡುತ್ತಿರುತ್ತದೆ. ಆದರೆ ಮಕ್ಕಳನ್ನು ಪಡೆದ ದಂಪತಿಗಳಾದರೋ ನಾನಾ ಚಿಂತೆಗಳಿಂದ ತೊಳಲಾಡುತ್ತಿರುತ್ತಾರೆ.

## ೨೦. ಸಾಲ ಕುರಿತ ಗಾದೆಗಳು

**1. "ಕಡ ಹುಟ್ಟಿ ಬಡವ ಕೆಟ್ಟ"**

ತೀರಿಸುವುದಕ್ಕೆ ಶಕ್ತಿಯಿಲ್ಲದ ಬಡವರು ಸಾಲಮಾಡಿ, ಬಡ್ಡಿ ಚಕ್ರಬಡ್ಡಿ ಎಂದು ಕಡೆಗೆ ಸಾಲಕ್ಕಾಗಿ ತನ್ನ ಮನೆ-ಮಠಗಳನ್ನು ಕಳೆದುಕೊಳ್ಳುತ್ತಾರೆ. ಆದ್ದರಿಂದಲೇ ಬಡವನ ಪಾಲಿಗೆ ಸಾಲ ಶೂಲವಾಗುತ್ತದೆ. ತೀರಿಸುವುದಕ್ಕೆ ಶಕ್ತಿ ಇದ್ದಷ್ಟು ಮಾತ್ರ ಸಾಲ ಮಾಡಬೇಕು. ಅದೂ ತುರ್ತು ಪರಿಸ್ಥಿತಿಗಳಲ್ಲಿ ಮಾತ್ರ.

**2. "ಊರೆಲ್ಲ ಸಾಲ ಇವನೊಬ್ಬ ಲೋಲ"**

ಕೆಲವರಿರುತ್ತಾರೆ. ಇವರು ಎಲ್ಲೆಲ್ಲಿ ಸಾಲ ಸಿಗುತ್ತದೋ ಅಲ್ಲೆಲ್ಲಾ ಸಾಲ ಮಾಡಿ, ದುಂದು ವೆಚ್ಚ ಮಾಡಿ ಮೆರೆಯುತ್ತಾರೆ. ಕಡೆಗೆ ಮನೆ-ಮಠ ಮಾರಿಕೊಂಡು ಭಿಕಾರಿಗಳಾಗುತ್ತಾರೆ.

## ೨೧. ವ್ಯರ್ಥ ಕುರಿತ ಗಾದೆಗಳು

**1. "ಸಮುದ್ರಕ್ಕೆ ನೀರು ಸುರಿದ ಹಾಗೆ"**

ಸಮುದ್ರಕ್ಕೆ ಎಷ್ಟೇ ನೀರು ಸುರಿದರೂ ಅದರ ಮಟ್ಟ ಒಂದು ಅಂಗುಲವೂ ಜಾಸ್ತಿಯಾಗುವುದಿಲ್ಲ. ಅಂದರೆ ವ್ಯರ್ಥ ಶ್ರಮ. ಯಾವುದೇ ಒಂದು ಕೆಲಸ ನಿರರ್ಥಕವೆಂದು ತಿಳಿಸುವಾಗ ಈ ಗಾದೆಯನ್ನು ಬಳಸುತ್ತಾರೆ.

**2. "ಹಾವು ಹೊಡೆದು ಹದ್ದಿಗೆ ಹಾಕಿದ ಹಾಗೆ"**

ಹಾವು ಹೊಡೆದು ಹದ್ದಿಗೆ ಹಾಕಿದರೆ ಹದ್ದು ಸಂತೋಷದಿಂದ ತಿನ್ನುತ್ತದೆ. ಹಾವು ಹೊಡೆದವನಿಗೆ ಯಾವ ಪ್ರತಿಫಲವೂ ಸಿಗುವುದಿಲ್ಲ. ಅನೇಕ ಕೆಲಸಗಳು ಇಂಥವೇ ಆಗಿರುತ್ತವೆ. ಆ ಕೆಲಸಗಳಿಂದ ಬೇರೆಯವರಿಗೆ ಪ್ರಯೋಜನವಾಗುತ್ತದೆ.

ಆ ಕೆಲಸ ಮಾಡಿದ ವ್ಯಕ್ತಿಗೆ ಮಾತ್ರ ಏನೂ ಪ್ರಯೋಜನವಾಗುವುದಿಲ್ಲ. ಇಂಥ ಸಂದರ್ಭಗಳಲ್ಲಿ ಈ ಗಾದೆ ಬಳಕೆಯಾಗಿದೆ.

## ಕವಿಯ ಮಹತ್ವ ಕುರಿತ ಗಾದೆ

### 1. "ರವಿ ಕಾಣದ್ದನ್ನು ಕವಿ ಕಂಡ"

ಕವಿಯ ಕಲ್ಪನಾ ಶಕ್ತಿ ಎಷ್ಟಿರುತ್ತದೆಂದರೆ ರವಿ ಕಾಣದ್ದನ್ನು ಸಹ ಇವನು ಕಾಣುತ್ತಾನೆ. ಪ್ರಪಂಚವನ್ನೇ ನೋಡುತ್ತಿರುವ ಸೂರ್ಯನಿಗೂ ಕಾಣದ ಸಂಗತಿಗಳು ಕವಿಗೆ ಕಾಣುತ್ತವೆ. ಅಂದರೆ ಕವಿ ಸೃಷ್ಟಿ ಅದ್ಭುತವಾದದ್ದು. ಆದ್ದರಿಂದಲೇ ಕವಿಗೆ ಹೆಚ್ಚಿನ ಸನ್ಮಾನ. ರವಿ ಹೇಗೆ ಲೋಕಕ್ಕೆ ಕಣ್ಣಾಗಿರುವನೋ ಅದೇ ರೀತಿ ಕವಿ ಈ ಸಮಾಜಕ್ಕೆ ಕಣ್ಣಾಗಿರುತ್ತಾನೆ.

## ಕಾರ್ಯದ ಮಹತ್ವ ಕುರಿತ ಗಾದೆ

### "ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ"

ಕುಂಬಾರ ಒಂದು ಮಡಕೆ ಮಾಡಬೇಕಾದರೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತಾನೆ. ಕೆರೆಯಿಂದ ಜೇಡಿಮಣ್ಣು ತಂದು ಅದನ್ನು ಹದಮಾಡಿ, ತಟ್ಟಿ, ಮಡಕೆಯನ್ನು ಮಾಡಿ, ಅದನ್ನು ಒಣಗಿಸಿ, ಬೇಯಿಸಿ ನಂತರ ಮಾರಾಟ ಮಾಡುತ್ತಾನೆ. ಆದರೆ ಒಬ್ಬ ವ್ಯಕ್ತಿ ಒಂದೇ ನಿಮಿಷದಲ್ಲಿ ಒಂದು ದೊಣ್ಣೆಯಿಂದ ಮಡಕೆಗಳನ್ನು ಒಡೆದು ಹಾಕಬಹುದು. ಅಂದರೆ ಯಾವುದೇ ವಸ್ತುವನ್ನು ಸೃಷ್ಟಿ ಮಾಡುವುದು ಬಹಳ ಕಷ್ಟ. ಆದರೆ ಅದನ್ನು ನಾಶ ಮಾಡುವುದು ಸುಲಭ. ಅದೇ ರೀತಿ ಒಂದು ಕಾರ್ಯವನ್ನು ಮಾಡಿಮುಗಿಸುವುದಕ್ಕೆ ಬಹಳ ಸಮಯ ಬೇಕಾಗುತ್ತದೆ. ಆದರೆ ಆ ಕಾರ್ಯವನ್ನು ಕೆಡಿಸುವುದಕ್ಕೆ ಹೆಚ್ಚು ಸಮಯ ಬೇಕಾಗುವುದಿಲ್ಲ. ಈ ಅರ್ಥದಲ್ಲಿ ಈ ಗಾದೆ ಬಳಕೆಯಲ್ಲಿದೆ.

## ವ್ಯಾಪಾರ ಕುರಿತ ಗಾದೆ

### "ಲಾಭವಿಲ್ಲದ ವ್ಯಾಪಾರ ಕತ್ತೆ ಮೈ ತುರಿಸಿದಂತೆ"

ವ್ಯಾಪಾರ ಮಾಡುವುದು ಲಾಭಕ್ಕಾಗಿ. ಲಾಭವೇ ಇಲ್ಲದ ಮೇಲೆ ವ್ಯಾಪಾರ ಮಾಡಿ ಏನು ಪ್ರಯೋಜನ ? ಅದು ಕತ್ತೆ ಮೈ ತುರಿಸಿದಷ್ಟೇ ನಿರರ್ಥಕವಾದ ಕೆಲಸ. ಆದ್ದರಿಂದ ಯಾವ ವ್ಯಾಪಾರ ಮಾಡಬೇಕಾದರೂ ಲಾಭದ ದೃಷ್ಟಿ ಇಟ್ಟುಕೊಂಡು ಮಾಡಬೇಕು ಎಂಬುದು ಈ ಗಾದೆಯ ಆಶಯ.

## ಕಣ್ಣು ಕುರಿತ ಗಾದೆ

**"ಕಣ್ಣಿನಷ್ಟು ಸೂಕ್ಷ್ಮವಿಲ್ಲ, ಮಣ್ಣಿನಷ್ಟು ಆಧಾರವಿಲ್ಲ"**

ಈ ಗಾದೆಯ ಅರ್ಥ ಸ್ಪಷ್ಟವಾಗಿಯೇ ಇದೆ. ಕಣ್ಣು ಅತ್ಯಂತ ಸೂಕ್ಷ್ಮವಾದ ಅಂಗವೆಂದೂ, ಅದೇ ರೀತಿ ಮಣ್ಣಿಗಿಂತಲೂ ಆಧಾರವಾದದ್ದು ಮನುಷ್ಯನಿಗೆ ಇನ್ನಾವುದೂ ಇಲ್ಲವೆಂದು ಈ ಗಾದೆ ತಿಳಿಸುತ್ತದೆ.

## ಅವಿವೇಕ ಕುರಿತ ಗಾದೆಗಳು

**1. "ಕೋತಿ ಕೈಗೆ ಗುಲಗಂಜಿ ಸಿಕ್ಕಿದ ಹಾಗೆ""ಮಂಗನ ಕೈಗೆ ಮಾಣಿಕ್ಯ ಸಿಕ್ಕಿದ ಹಾಗೆ"**

ಕೋತಿ ಕೈಗೆ ಒಂದು ಗುಲಗಂಜಿ ಸಿಗುತ್ತದೆ. ಅದು ಆ ಗುಲಗಂಜಿಯನ್ನು ತಿರುಗಿಸಿ, ತಿರುಗಿಸಿ ನೋಡುತ್ತದೆ. ಗುಲಗಂಜಿ ಕೆಂಪಾಗಿದ್ದು ಅದರ ಮೇಲೆ ಒಂದು ಕಪ್ಪು ಚುಕ್ಕೆ ಇರುತ್ತದೆ. ಕೋತಿಗೆ ಆಶ್ಚರ್ಯ. ತಿರುಗಿಸಿ ತಿರುಗಿಸಿ ಕುತೂಹಲದಿಂದ ನೋಡುತ್ತದೆ. ಅದೇ ರೀತಿ ಅವಿವೇಕಿಯೊಬ್ಬನಿಗೆ ಸುಂದರವಾದ, ಗುಣವತಿಯಾದ ಹೆಂಡತಿ ಸಿಕ್ಕಿದರೆ ಅವಳನ್ನು ಸರಿಯಾಗಿ ಬಾಳಿಸದೆ, ತನ್ನ ಅವಿವೇಕದಿಂದ ಅವಳನ್ನು ಕಳೆದುಕೊಳ್ಳುತ್ತಾನೆ. ಇದೇ ರೀತಿ ಮನುಷ್ಯ ಅಮೂಲ್ಯ ವಸ್ತುಗಳನ್ನು ಅವುಗಳ ಬೆಲೆ ತಿಳಿಯದೆ ಕಳೆದುಕೊಳ್ಳುತ್ತಾನೆ ಎಂದು ಹೇಳುವ ಸಂದರ್ಭದಲ್ಲಿಯೂ ಈ ಗಾದೆ ಬಳಸುತ್ತಾರೆ.

## ಪೂರ್ವ ಸಿದ್ಧತೆ ಕುರಿತ ಗಾದೆಗಳು

**1. "ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡುವುದಕ್ಕೆ ಹೋದರಂತೆ"**

ಮೊದಲೇ ಬಾವಿ ತೋಡಿದ್ದರೆ, ಅಕಸ್ಮಾತ್ ಮನೆಗೆ ಬೆಂಕಿ ಬಿದ್ದರೆ ನೀರು ಹಾಕಿ ಆರಿಸಬಹುದು. ಮನೆಗೆ ಬೆಂಕಿ ಬಿದ್ದ ಸಂದರ್ಭದಲ್ಲಿ ಬಾವಿ ತೋಡುವುದಕ್ಕೆ ಹೋದರೆ, ಬಾವಿ ತೋಡುವುದರೊಳಗೆ ಮನೆ ಸುಟ್ಟು ಹೋಗಿರುತ್ತದೆ. ಅದೇ ರೀತಿ ಯಾವ ಕೆಲಸ ಮಾಡಬೇಕಾದರೂ ಅದಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು.

**2. "ಯುದ್ಧ ಕಾಲೇ ಶಸ್ತ್ರಾಭ್ಯಾಸ"**

ಈ ಗಾದೆಯೂ ಮೇಲಿನ ಗಾದೆಯ ಅರ್ಥವನ್ನೇ ಕೊಡುತ್ತದೆ. ಯುದ್ಧ

ಕಾಲದಲ್ಲಿ ಶಸ್ತ್ರಾಭ್ಯಾಸಕ್ಕೆ ತೊಡಗಿದರೆ ನಗೆಪಾಟಲಿಗೆ ಈಡಾಗಬೇಕಾಗುತ್ತದೆ. ಮೊದಲೇ ಶಸ್ತ್ರಾಭ್ಯಾಸ ಪಡೆದಿದ್ದರೆ ಯುದ್ಧ ಮಾಡುವುದು ಸಾಧ್ಯವಾಗುತ್ತದೆ. ಅದೇ ರೀತಿ ಯಾವ ಕೆಲಸ ಮಾಡಬೇಕಾದರೂ ಮೊದಲೇ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು.

## ಆರಂಭ ಶೂರತ್ವ ಕುರಿತ ಗಾದೆಗಳು

**1. "ಬರುಬರುತ್ತಾ ರಾಯರ ಕುದುರೆ ಕತ್ತೆಯಾಯ್ತು"**

ರಾಯರ ಮನೆಯಲ್ಲಿ ಹೊಸದಾಗಿ ಕೊಂಡು ತಂದ ಕುದುರೆ ಮೊದಮೊದಲು ಚೆನ್ನಾಗಿ ಓಡುತ್ತಿತ್ತು. ಕಾಲಕ್ರಮೇಣ ನಿಧಾನವಾಗಿ ಓಡಲಾರಂಭಿಸಿತು. ಅದೇ ರೀತಿ ಕೆಲಸದ ಪ್ರಾರಂಭದಲ್ಲಿ ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಕಾಲಕ್ರಮೇಣ ಉತ್ಸಾಹ ಕಳೆದುಕೊಂಡು ಕೆಲಸವನ್ನೇ ನಿಲ್ಲಿಸಿಬಿಡುತ್ತಾರೆ.

**2. "ಅಗಸ ಹೊಸದರಲ್ಲಿ ಎತ್ತಿ ಎತ್ತಿ ಒಗೆದ"**

ಹೊಸದರಲ್ಲಿ ಅಗಸನೊಬ್ಬ ಬಟ್ಟೆಗಳನ್ನು ಶುಭ್ರವಾಗಿ ಒಗೆದು ಕೊಡುತ್ತಿದ್ದನು. ಕಾಲಕ್ರಮೇಣ ಸರಿಯಾಗಿ ಒಗೆಯದೇ ನೀರಿಗೆ ಅದ್ದಿ ಅದ್ದಿ ಒಣಗಿಸತೊಡಗಿದ. ಕೆಲವರು ಇದೇ ರೀತಿ ಆರಂಭ ಶೂರತ್ವ ಹೊಂದಿರುತ್ತಾರೆ.

## ಸಮಯ ಸಾಧಕತನ ಕುರಿತ ಗಾದೆಗಳು

**1. "ಕಾರ್ಯವಾಸಿ ಕತ್ತೆ ಕಾಲು ಕಟ್ಟು"**

ನಮ್ಮ ಕೆಲಸವಾಗಬೇಕಾದರೆ ಕತ್ತೆಯ ಕಾಲನ್ನಾದರೂ ಹಿಡಿಯಬೇಕು ಎಂಬುದು ಈ ಗಾದೆಯ ಸಾರಾಂಶ.

**2. "ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ"**

ಹೊಳೆ ದಾಟುವವರೆಗೆ ಅಂಬಿಗನನ್ನು ಹೆಚ್ಚು ಗೌರವದಿಂದ ನೋಡುತ್ತಿರುತ್ತಾರೆ. ಹೊಳೆ ದಾಟಿದ ಮೇಲೆ ಅಂಬಿಗನ ಕಡೆ ತಿರುಗಿಯೂ ನೋಡದೆ ಹೊರಟು ಬಿಡುತ್ತಾರೆ. ಅದೇ ರೀತಿ ಕೆಲವರು ತಮ್ಮ ಕೆಲಸ ಮಾಡಿಸಿಕೊಳ್ಳುವವರೆಗೂ ನಮ್ಮನ್ನು ಹೊಗಳಿ ಅಟ್ಟಕ್ಕೇರಿಸುತ್ತಾರೆ. ತಮ್ಮ ಕೆಲಸವಾದ ಮೇಲೆ ನಮ್ಮನ್ನು ಪೂರ್ತಿಯಾಗಿ ಮರೆತೇಬಿಡುತ್ತಾರೆ.

## ವೃದ್ಧಾಪ್ಯ ಕುರಿತ ಗಾದೆ

**1. "ಊರು ಹೋಗು ಅನ್ನುತ್ತದೆ, ಕಾಡು ಬಾ ಅನ್ನುತ್ತದೆ"**

ಸಾವು ಸಮೀಪಿಸಿರುವ ವೃದ್ಧನೊಬ್ಬನನ್ನು ಊರು ಹೋಗು ಅನ್ನುತ್ತದೆ. ಕಾಡು ಅಂದರೆ ಮರಣ ಕೈ ಬೀಸಿ ಕರೆಯುತ್ತದೆ.

## ಮಾಡಬೇಕಾದ್ದನ್ನು ಮಾಡದವನ ಕುರಿತ ಗಾದೆ

**1. "ಅಪ್ಪನನ್ನು ಅಪ್ಪಾ ಅನ್ನದವನು ಚಿಕ್ಕಪ್ಪನನ್ನು ಅಪ್ಪ ಅನ್ನುತ್ತಾನೆಯೇ ?"**

ಮಗನಾದವನು ಮೊದಲು ಅಪ್ಪನನ್ನು ಅಪ್ಪ ಎಂದು ಗೌರವದಿಂದ ಕರೆಯಬೇಕು. ಆಮೇಲೆ ಚಿಕ್ಕಪ್ಪ ಮೊದಲಾದವರಿಗೆ ಗೌರವ ಕೊಡಬೇಕು. ಹಾಗಲ್ಲದೆ ಅಪ್ಪನಿಗೆ ಗೌರವ ಕೊಡದವನು ಮತ್ತಾರಿಗೆ ಗೌರವ ಕೊಡುತ್ತಾನೆ. ಅವನು ಯಾರಿಗೂ ಗೌರವ ಕೊಡುವುದಿಲ್ಲ. ಅದೇ ರೀತಿ ತನಗೆ ಸಹಜವಾದ, ಸಾಧ್ಯವಾದ ಕೆಲಸವನ್ನು ಮಾಡಲಾಗದ ವ್ಯಕ್ತಿ ತನಗೆ ಸಹಜವಲ್ಲದ , ಸಾಧ್ಯವಿಲ್ಲದ ಕೆಲಸವನ್ನು ಹೇಗೆ ತಾನೆ ಮಾಡಿಯಾನು ? ಎಂಬ ಅರ್ಥದಲ್ಲಿ ಈ ಗಾದೆ ಬಳಕೆಯಾಗಿದೆ.

## ಸುಲಭದ ಕೆಲಸವನ್ನು ಮಾಡಲಾಗದವನನ್ನು ಕುರಿತ ಗಾದೆ

**1. ತನ್ನ ಮನೆ ತವರ ಬಡಿಯದವನು ನೆರೆ ಮನೆಯ ಕಬ್ಬಿಣ ಬಡಿದಾನೆ ?"**

ಈ ಗಾದೆಯು ಸುಲಭವಾದ ಕೆಲಸ ಮಾಡದವನು ಕಷ್ಟವಾದ ಕೆಲಸ ಮಾಡಿಯಾನೆ ಎಂದು ಪ್ರಶ್ನಿಸುತ್ತದೆ. ತವರ ಮೃದುವಾದ ಲೋಹ. ಕಬ್ಬಿಣ ಗಟ್ಟಿಯಾದ ಲೋಹ. ಮೃದುವಾದ ತವರವನ್ನೇ ಸುತ್ತಿಗೆಯಿಂದ ಬಡಿಯದ ಕಸುಬುಗಾರ, ಗಟ್ಟಿಯಾದ ಕಬ್ಬಿಣವನ್ನು ಬಡಿದಾನೆ ಎಂದು ಕೇಳುತ್ತದೆ ಈ ಗಾದೆ. ಈ ಗಾದೆಯಲ್ಲಿ ತವರ ಮತ್ತು ಕಬ್ಬಿಣ ಲೋಹಗಳನ್ನು ಬಳಸಿರುವುದು ಕನ್ನಡಿಗರು ಎಂಥ ತಿಳುವಳಿಕೆಯುಳ್ಳವರು ಎಂಬುದನ್ನು ತಿಳಿಸುತ್ತದೆ.

## ಬೇರೆಯವರ ಕಷ್ಟವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವವರ ಕುರಿತ ಗಾದೆ

**1. "ಬೆಂದ ಮನೆಲಿ ಇರಿದದ್ದೇ ಲಾಭ"**

ಮನೆಗೆ ಬೆಂಕಿ ಬಿದ್ದಿರುತ್ತದೆ. ಮನೆಯವನಿಗೆ ಅಪಾರ ನಷ್ಟವಾಗಿರುತ್ತದೆ.

ಇಂಥ ಸಮಯದಲ್ಲಿ ಕೆಲವರು ಉರಿಯುತ್ತಿರುವ ಮನೆಯಿಂದ ಅನೇಕ ವಸ್ತುಗಳನ್ನು ಅಪಹರಿಸಿಕೊಂಡು ಹೋಗುತ್ತಾರೆ. ಅಂದರೆ ಹೀಗೆ ಅಪಹರಿಸುವವರಿಗೆ ತಮಗಾದ ಲಾಭವೇ ಮುಖ್ಯವಾಗುತ್ತದೆ. ಮನೆಯವನಿಗಾದ ನಷ್ಟ ಅವರ ಅರಿವಿಗೇ ಬರುವುದಿಲ್ಲ. ಅಂದರೆ ಯಾರಿಗಾದರೂ ನಷ್ಟವಾದಾಗ ಅದೇ ಸಂದರ್ಭವನ್ನು ತಮಗೆ ಲಾಭ ಮಾಡಿಕೊಳ್ಳುವುದಕ್ಕೆ ಕೆಲವರು ಉಪಯೋಗಿಸಿಕೊಳ್ಳುತ್ತಾರೆ. ಅಂಥವರನ್ನು ಕುರಿತು ಈ ಗಾದೆಯನ್ನು ಹೇಳಲಾಗಿದೆ.

**"ಹಾಳೂರಿಗೆ ಉಳಿದವನೇ ಗೌಡ"**

ಅಯೋಗ್ಯರಿಗೆ ಸಿಕ್ಕಿದ ಸ್ಥಾನಮಾನ ಕುರಿತ ಗಾದೆ ಇದು. ಹಾಳೂರಿನಲ್ಲಿ ಜನರೆ ಇರುವುದಿಲ್ಲ. ಇದ್ದ ಒಬ್ಬನು ತಾನೇ ಊರಿನ ಗೌಡ ಎಂದುಕೊಳ್ಳುತ್ತಾನೆ. ಏಕೆಂದರೆ ಅವನ ಗೌಡಿಕೆಯನ್ನು ಪ್ರಶ್ನಿಸುವವರಾರೂ ಇರುವುದಿಲ್ಲ. ಅಂದರೆ ಯಾವುದೇ ಕ್ಷೇತ್ರದಲ್ಲಾಗಲೀ ಯೋಗ್ಯರು ಇಲ್ಲದಿದ್ದಾಗ ಅಯೋಗ್ಯರಿಗೆ ಮನ್ನಣೆ ದೊರೆಯುತ್ತದೆ ಎಂದು ಇದರ ಭಾವಾರ್ಥ.

**"ಇದ್ದಿದ್ದು ಒಂದು ಚೂರು ಇಲಿ ಕಚ್ಚಿಕೊಂಡು ಹೋಯಿತು"**

ಇದ್ದದ್ದು ಸ್ವಲ್ಪ ನಷ್ಟವಾಗುವುದರ ಕುರಿತ ಗಾದೆ. ಇಲ್ಲಿ ಇರುವುದೇ ಒಂದು ಚೂರು. ಅದನ್ನು ಇಲಿ ಕಚ್ಚಿಕೊಂಡು ಹೋದರೆ ಏನೂ ಉಳಿಯುವುದಿಲ್ಲ. ಅಂದರೆ ನಮ್ಮಲ್ಲಿ ಇರುವ ಸ್ವಲ್ಪ ವಸ್ತು, ಹಣವನ್ನು ಬೇರೆಯವರು ಈಸಿಕೊಂಡು ಹೋದರೆ ನಮಗೆ ಏನೂ ಉಳಿಯುವುದಿಲ್ಲ ಎಂಬುದು ಈ ಗಾದೆಯ ಅರ್ಥ. ಜಾಸ್ತಿ ಹಣವಿದ್ದಾಗ ಸ್ವಲ್ಪಭಾಗ ಹೋದರೂ ನಮಗೆ ಅಂಥ ನಷ್ಟವಾಗುವುದಿಲ್ಲ. ಆದರೆ ಇರುವ ಸ್ವಲ್ಪ ಹಣ ಅಷ್ಟೂ ಹೋದರೆ ಆ ನಷ್ಟ ತುಂಬುವುದಕ್ಕಾಗುವುದಿಲ್ಲ ಎಂಬುದೇ ಈ ಗಾದೆಯ ಸಾರಾಂಶ.

**"ಗಂಜಿ ಕುಡಿಯುವವನಿಗೆ ಗಡ್ಡ ಹಿಡಿಯುವವನೊಬ್ಬ"**

ಯೋಗ್ಯತೆ ಇಲ್ಲದವನ ದರ್ಬಾರು ಕುರಿತ ಗಾದೆ. ಇಲ್ಲಿ ಒಬ್ಬ ಭಿಕ್ಷುಕ ಇರುತ್ತಾನೆ. ಭಿಕ್ಷೆ ಬೇಡಿಕೊಂಡು ಜೀವಿಸುತ್ತಿರುತ್ತಾನೆ. ಆದರೆ ಅವನು ಗಂಜಿ ಕುಡಿಯುವಾಗ ತನ್ನ ಗಡ್ಡವನ್ನು ಓರೆ ಮಾಡಿ, ಗಂಜಿ ತಗಲದ ಹಾಗೆ ಹಿಡಿದುಕೊಳ್ಳಲು ಮತ್ತೊಬ್ಬ ನೆರವಿಗೆ ಬರಬೇಕೆಂದು ಆಶಿಸುತ್ತಾನೆ. ಅಂದರೆ

ತಾನೇ ಭಿಕ್ಷೆ ಬೇಡುವವನು. ತನಗೆ ಒಬ್ಬ ಆಳು ಬೇಕು ಎಂದ ಹಾಗಾಯಿತು. ಬಡವನೊಬ್ಬನು ಅನಾವಶ್ಯಕವಾಗಿ ಬೇರೊಬ್ಬರ ಸಹಾಯ, ಅಪೇಕ್ಷೆ ಪಡುವ ಸಂದರ್ಭದಲ್ಲಿ ಈ ಗಾದೆ ಬಳಸಲಾಗಿದೆ.

**"ಮನೆಗೆ ಮಾರಿ ಊರಿಗೆ ಉಪಕಾರಿ"**

ವಿವೇಕ ಇಲ್ಲದವನ ಕುರಿತ ಗಾದೆ ಇದು. ಒಬ್ಬನು ಊರಿನ ಜನರಿಗೆಲ್ಲಾ ಸಹಾಯ ಮಾಡುತ್ತಿರುತ್ತಾನೆ. ಆದರೆ ತನ್ನ ಮನೆಯುವರಿಗಾಗಿ ಏನೂ ದುಡಿಯುವುದಿಲ್ಲ. ಮೊದಲು ತನ್ನ ಮನೆಯ ಯೋಗಕ್ಷೇಮ ನೋಡಿಕೊಂಡು ನಂತರ ಊರಿನವರ ಯೋಗಕ್ಷೇಮ ನೋಡಿಕೊಳ್ಳಬೇಕು ಎಂಬುದು ಈ ಗಾದೆಯ ಆಶಯ.

**"ಎಮ್ಮೆ ಬೆಣ್ಣೆ ಎಮ್ಮೆ ಕಣ್ಣಿಗೆ ಸಾಲುವುದಿಲ್ಲ"**

ಅಲ್ಪ ಆದಾಯ ಕುರಿತ ಗಾದೆ ಇದು. ದುಡಿಯುವ ಒಬ್ಬ ಗಂಡಸಿನ ವರಮಾನ ಅವನ ಸ್ವಂತ ಖರ್ಚಿಗೆ ಸಾಲುವುದಿಲ್ಲ. ಅವನು ಮನೆ ಖರ್ಚಿಗೆ ಹಣವನ್ನೇ ಕೊಡುವುದಿಲ್ಲ. ಅವನ ದುಡಿಮೆ ಅವನಿಗೇ ಸಾಲದಿರುವಾಗ ಹೆಂಡತಿ ಮಕ್ಕಳನ್ನು ಹೇಗೆ ಸಾಕುತ್ತಾನೆ ? ಇಂಥ ಸಂದರ್ಭದಲ್ಲಿ ಈ ಗಾದೆ ಬಳಕೆಗೆ ಬಂದಿದೆ.

**"ಉಂಡೂ ಹೋದ, ಕೊಂಡೂ ಹೋದ"**

ಸಹಾಯ ಮಾಡಿದವನಿಗೆ ನಷ್ಟ ಮಾಡುವವನನ್ನು ಕುರಿತ ಗಾದ ಇದು. ಇಲ್ಲಿ ಒಬ್ಬ ವ್ಯಕ್ತಿಯನ್ನು ಊಟಕ್ಕೆ ಕರೆದರೆ, ಅವನು ಊಟ ಮಾಡಿ ಗಂಭೀರವಾಗಿ ಮನೆಗೆ ಹೋಗಬೇಕು ತಾನೆ ? ಆದರೆ ಅವನು ಹಾಗೆ ಮಾಡದೆ, ಜೊತೆಗೆ ಆ ಮನೆಯ ವಸ್ತುಗಳನ್ನೂ ಕದ್ದು ತೆಗೆದುಕೊಂಡು ಹೋಗುತ್ತಾನೆ. ಅಂದರೆ ಸಹಾಯ ಪಡೆದ ವ್ಯಕ್ತಿಯೊಬ್ಬ ಸಹಾಯ ಮಾಡಿದ ವ್ಯಕ್ತಿಗೆ ಇನ್ನೂ ಹೆಚ್ಚಿನ ಕಷ್ಟ ಉಂಟುಮಾಡುತ್ತಾನೆ. ಅಂಥ ಸಂದರ್ಭದಲ್ಲಿ ಈ ಗಾದೆ ಬಳಕೆಗೆ ಬಂದಿದೆ.

**"ಹಾಗಲ ಕಾಯಿಗೆ ಬೇಲಿ ಸಾಕ್ಷಿ"**

ಕಳ್ಳನು ಕಳ್ಳನ ಪರ ಸಾಕ್ಷಿ ಹೇಳುವುದರ ಕುರಿತ ಗಾದೆ ಇದು. ಹಾಗಲು ಬಳ್ಳಿ ಬೇಲಿಯ ಮೇಲೆ ಬೆಳೆದು ಹಬ್ಬಿ ಹಾಗಲು ಕಾಯಿಗಳನ್ನು ಬಿಟ್ಟಿರುತ್ತದೆ. ಅದು ಯಾವಾಗಲೂ ಬೇಲಿಯ ಆಶ್ರಯದಲ್ಲೇ ಇರುತ್ತದೆ. ಹಾಗಾಗಿ ಅದು

ಸಾಕ್ಷಿಗಾಗಿ ಬೇಲಿಯನ್ನೇ ತೋರಿಸುತ್ತದೆ. ಏಕೆಂದರೆ ಬೇಲಿ ಯಾವತ್ತೂ ಹಾಗಲ ಕಾಯಿಯ ಪರವಾಗಿಯೇ ಸಾಕ್ಷಿ ಹೇಳುತ್ತದೆ. ಅದೇ ರೀತಿ ಮನುಷ್ಯನು ತನಗೆ ಬೇಕಾದವರಿಂದಲೇ ಸಾಕ್ಷಿ ಹೇಳಿಸುತ್ತಾನೆ. ಅಲ್ಲಿಗೆ ಸಾಕ್ಷಿ ಹೇಳುವವನೂ ತನ್ನಂಥವನೇ ಆಗಿರುತ್ತಾನೆ. ಕಳ್ಳನು ಕಳ್ಳನ ಪರ ಸಾಕ್ಷಿ ಹೇಳಿದಂತೆ. ಇಂಥ ಸಂದರ್ಭಗಳಲ್ಲಿ ಈ ಗಾದೆ ಬಳಕೆಯಾಗಿದೆ.

**"ಹೊಳೆ ನೀರಿಗೆ ದೊಣೆ ನಾಯಕನ ಅಪ್ಪಣೆಯೇ ?"**

ಸಹಜವಾದ ಅಧಿಕಾರ ಬಳಸುವುದರ ಕುರಿತ ಗಾದೆ ಇದು. ದೊಣೆ ಎಂದರೆ ಕೊಳ. ಕೊಳದ ನೀರನ್ನು ಬಳಸಬೇಕಾದರೆ ಕೊಳದ ಯಜಮಾನನನ್ನು ಕೇಳಬೇಕು. ಆದರೆ ನದಿ ನೀರನ್ನು ಬಳಸಲು ಯಾರನ್ನೂ ಕೇಳಬೇಕಾಗಿಲ್ಲ. ಅದು ಪ್ರಕೃತಿದತ್ತವಾಗಿ ಹರಿಯುತ್ತಿರುತ್ತದೆ. ಅಂದರೆ ಸಹಜವಾಗಿ ಮಾಡಬೇಕಾದ ಕೆಲಸಗಳಿಗೆಲ್ಲ ಬೇರೆಯವರ ಅಪ್ಪಣೆ ಬೇಕಾಗಿಲ್ಲ ಎಂಬುದೇ ಇದರ ಭಾವ.

**"ಆಪತ್ಕಾಲಕ್ಕೆ ಆದವನೇ ನೆಂಟ"**

ನಿಜವಾದ ನೆಂಟನನ್ನು ಕುರಿತ ಗಾದೆ ಇದು. ನಮಗೆ ಸಾಕಷ್ಟು ನೆಂಟರಿರಬಹುದು, ಸಂಬಂಧಿಕರಿರಬಹುದು. ಆದರೆ ನಿಜವಾದ ನೆಂಟರು ಯಾರು ? ಯಾರು ಕಷ್ಟ ಕಾಲದಲ್ಲಿ ನಮಗೆ ಸಹಾಯ ಮಾಡುತ್ತಾರೋ ಅವರೇ ನಿಜವಾದ ನೆಂಟರು ಎಂಬುದನ್ನು ಈ ಗಾದೆ ತಿಳಿಸುತ್ತದೆ. ಆದ್ದರಿಂದ ಬೇರೆಯವರು ಕಷ್ಟದಲ್ಲಿದ್ದಾಗ ಅವರಿಗೆ ಸಹಾಯ ಮಾಡುವವನೇ ದೊಡ್ಡ ವ್ಯಕ್ತಿ. ಅವನೇ ನಿಜವಾದ ನೆಂಟ.

**"ಕುಲಕ್ಕೆ ಮೃತ್ಯು ಕೊಡಲಿ ಕಾವು"**

ತನ್ನ ಸಂತತಿಯೇ ತನಗೆ ಶತ್ರುವಾದಾಗ ಕುರಿತ ಗಾದೆ ಇದು. ಮರದ ಕೊಂಬೆಯಿಂದ ತಯಾರಿಸಿದ ಕೊಡಲಿಯ ಕಾವನ್ನು ಕೊಡಲಿಗೆ ತೊಡಿಸಿ, ಆ ಕೊಡಲಿಯಿಂದ ಆ ಮರವನ್ನೇ ಕಡಿಯಲು ಉಪಯೋಗಿಸುತ್ತಾರೆ. ಇಲ್ಲಿ ಕೊಡಲಿಯ ಕಾವು ತನ್ನ ಕುಲವಾದ ಮರಕ್ಕೆ ಮೃತ್ಯುಪ್ರಾಯವಾಗಿದೆ. ಇದೇ ರೀತಿ ಅಯೋಗ್ಯನಾದ, ದುಷ್ಟನಾದ ಒಬ್ಬ ವ್ಯಕ್ತಿ ಒಂದು ವಂಶದಲ್ಲಿ ಹುಟ್ಟುವುದರಿಂದ ಆ ವಂಶದ ನಾಶಕ್ಕೆ, ಅಪಕೀರ್ತಿಗೆ ಕಾರಣನಾಗುತ್ತಾನೆ.

**"ಗುಲಗಂಜಿಯ ಕಪ್ಪು ಗುಲಗಂಜಿಗೆ ಕಾಣಿಸುವುದಿಲ್ಲ"**

ಗುಲಗಂಜಿ ಒಂದು ಬಳ್ಳಿಯ ಬೀಜ. ಒಳಗಡೆ ಎರಡು ಬೇಳೆಗಳಿರುತ್ತವೆ. ಮೇಲಿನ ಸಿಪ್ಪೆ ಅಚ್ಚ ಕೆಂಪು ಬಣ್ಣದ್ದಾಗಿರುತ್ತದೆ. ಆದರೆ ಅದರ ಒಂದು ತುದಿಯಲ್ಲಿ ಕಪ್ಪು ಚುಕ್ಕೆ ಇರುತ್ತದೆ. ಗುಲಗಂಜಿ ತಾನೆಷ್ಟು ಕೆಂಪಗೆ ಇದ್ದೇನೆಂದು ಬೀಗುತ್ತಿರುತ್ತದೆಂಬುದು ಕವಿ ಕಲ್ಪನೆ. ಅದಕ್ಕೆ ಅದರ ತುದಿಯಲ್ಲಿರುವ ಕಪ್ಪು ಚುಕ್ಕೆ ಕಾಣಿಸುವುದಿಲ್ಲವೆಂದೇ ಕವಿ ಹೇಳುತ್ತಾನೆ. ಅದೇ ರೀತಿ ಕೆಲವರು ತಾವು ತುಂಬಾ ಒಳ್ಳೆಯವರೆಂದು ತಿಳಿದುಕೊಂಡಿರುತ್ತಾರೆ. ಅವರ ತಪ್ಪು ಅವರಿಗೆ ಕಾಣಿಸುತ್ತಲೇ ಇರುವುದಿಲ್ಲ. ಬೇರೆ ಯಾರಾದರೂ ಅವರ ತಪ್ಪನ್ನು ಎತ್ತಿ ಹೇಳಿದರೆ ಅವರಿಗೆ ಸಿಟ್ಟೇ ಬಂದು ಬಿಡುತ್ತದೆ. ಇಂಥ ಸಂದರ್ಭದಲ್ಲಿ ಈ ಗಾದೆ ಹುಟ್ಟಿಕೊಂಡಿದೆ.

**"ಕತ್ತೆಗೆ ಏಕೆ ಹತ್ತಿ ಕಾಳು ಮುಸುರೆ ?"**

ಹತ್ತಿಕಾಳು ಮುಸುರೆಯನ್ನು ಉಳುವ ಎತ್ತುಗಳಿಗೆ ತಿನ್ನಿಸುತ್ತಾರೆ, ಎತ್ತುಗಳಿಗೆ ಶಕ್ತಿ ಬರಲೆಂದು. ಕತ್ತೆಗೆ ಯಾರೂ ಹತ್ತಿಕಾಳು ಮುಸುರೆಯನ್ನು ತಿನ್ನಿಸುವುದಿಲ್ಲ. ಅಂದರೆ ಯೋಗ್ಯತೆ ಇಲ್ಲದವನಿಗೆ ಸನ್ಮಾನ ಮಾಡಬಾರದೆಂಬುದೇ ಇದರ ಆಶಯ.

**"ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಯಾರಿಗೂ ಕಾಣಿಸುವುದಿಲ್ಲವೇ ?"**

ಸಾಮಾನ್ಯವಾಗಿ ಬೆಕ್ಕು ಹಾಲು ಕುಡಿಯುವಾಗ ಕಣ್ಣು ಮುಚ್ಚಿಕೊಂಡು ಕುಡಿಯುತ್ತಿರುತ್ತದೆ. ತಾನು ಕುಡಿಯುವುದು ಯಾರಿಗೂ ಕಾಣಿಸುವುದಿಲ್ಲವೆಂದು ಬೆಕ್ಕು ತಿಳಿದಿರುತ್ತದೆಂಬುದು ಕವಿಯ ಕಲ್ಪನೆ. ಅದೇ ರೀತಿ ತಪ್ಪು ಮಾಡುವ ಜನ ತಾವು ಮಾಡುತ್ತಿರುವ ತಪ್ಪು ಯಾರಿಗೂ ಕಾಣುತ್ತಿಲ್ಲವೆಂದೇ ತಿಳಿದಿರುತ್ತಾರೆ. ಆದರೆ ಅವರ ತಪ್ಪು ಇತರರಿಗೆಲ್ಲಾ ತಿಳಿದು ಹೋಗಿರುತ್ತದೆ. ಇದು ಈ ಗಾದೆಯ ಭಾವ.

**"ಬೆಂಕಿಯಿಲ್ಲದೆ ಹೊಗೆ ಏಳುತ್ತದೆಯೇ ?"**

ತರ್ಕ ಕುರಿತ ಗಾದೆ ಇದು. ಹೊಗೆ ಕಂಡಾಗ ನಾವು ಅಲ್ಲಿ ಬೆಂಕಿ ಹತ್ತಿಕೊಂಡಿದೆ ಎಂದು ಭಾವಿಸುತ್ತೇವೆ. ಏಕೆಂದರೆ ಬೆಂಕಿಯಿಲ್ಲದೆ ಹೊಗೆ

ಬರುವುದಿಲ್ಲವೆಂಬುದು ನಮಗೆ ತಿಳಿದಿರುತ್ತದೆ. ಅದೇ ರೀತಿ ಯಾವುದೇ ಒಂದು ಸುದ್ದಿ ಹರಡಿದಾಗ ಅದರಲ್ಲಿ ಸ್ವಲ್ಪವಾದರೂ ಸತ್ಯವಿದೆಯೆಂದು ಜನ ತಿಳಿಯುತ್ತಾರೆ.

**"ತನಗೆ ಸೇರದೆ ಇದ್ದರೆ ಊರಿಗೆಲ್ಲಾ ಸೇರುವುದಿಲ್ಲವೇ ?"**

ಕೆಲವು ವಿಷಯಗಳು ನಮಗೆ ಸೇರದಿದ್ದರೆ ಬೇರೆಯವರಿಗೂ ಸೇರುವುದಿಲ್ಲವೆಂದು ತಿಳಿದುಕೊಳ್ಳುತ್ತೇವೆ. ಇದು ತಪ್ಪು. ಒಬ್ಬೊಬ್ಬರ ಅಭಿರುಚಿ ಒಂದೊಂದು ತೆರನಾಗಿರುತ್ತದೆ.

**"ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು"**

ಅವಶ್ಯಕತೆ ಇಲ್ಲದ ವಸ್ತುಗಳಿಗೆ ಪ್ರಾಮುಖ್ಯತೆ ನೀಡುವ ಕುರಿತ ಗಾದೆ ಇದು. ಇದರ ಅರ್ಥವೂ ಸರಳವಾಗಿದೆ. ಅವಶ್ಯಕತೆ ಇರುವ ವಸ್ತುಗಳಿಗಿಂತ ಅವಶ್ಯಕತೆ ಇಲ್ಲದ ವಸ್ತುಗಳಿಗೇ ಕೆಲವರು ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ.

**"ಬಕಾಸುರನ ಹೊಟ್ಟೆಗೆ ಕಾಸಿನ ಮಜ್ಜಿಗೆ"**

ಬಕಾಸುರನಿಗೆ ಹೆಚ್ಚಿಗೆ ಆಹಾರ ಬೇಕು. ಆದರೆ ಅವನಿಗೆ ಸ್ವಲ್ಪ ಆಹಾರ ಕೊಟ್ಟರೆ ಯಾವುದಕ್ಕೂ ಸಾಲುವುದಿಲ್ಲ. ಅದೇ ರೀತಿ ಹೆಚ್ಚಿನ ಅವಶ್ಯಕತೆ ಇರುವವರಿಗೆ ಸ್ವಲ್ಪ ಪ್ರಮಾಣದ ವಸ್ತುಗಳನ್ನು ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ.

**"ತಲೆ ತಲೆಗೂ ಪಟ್ಟ ಹೊಟ್ಟೆಗಿಲ್ಲದೆ ಕೆಟ್ಟ"**

ಇಲ್ಲಿ ಒಂದು ಗುಂಪಿಗೆ ಅಥವಾ ಒಂದು ಮನೆಗೆ ಒಬ್ಬ ಯಜಮಾನನಿದ್ದರೆ ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತಿರುತ್ತದೆ. ಆದರೆ ಗುಂಪು ಅಥವಾ ಮನೆಯಲ್ಲಿದ್ದವರೆಲ್ಲಾ ತಾವೇ ಯಜಮಾನರಂತೆ ವರ್ತಿಸಿದರೆ ಯಾವ ಕೆಲಸವೂ ಆಗುವುದಿಲ್ಲ. ಆಗ ಮನೆಯಲ್ಲಿದ್ದವರೆಲ್ಲಾ ವ್ಯವಸ್ಥೆಯಿಲ್ಲದೆ ಉಪವಾಸವಿರ ಬೇಕಾಗುತ್ತದೆ ಎಂಬುದೇ ಈ ಗಾದೆಯ ಭಾವ.

**"ಎಡಗೈ ಬಲಗೈ ನಂಬುವುದಿಲ್ಲ"**

ಇದು ನಂಬಿಕೆಯ ಪ್ರಶ್ನೆ. ಕೆಲವರು ಯಾರನ್ನೂ ನಂಬುವುದಿಲ್ಲ. ತಮ್ಮ ಸ್ವಂತ ಹೆಂಡತಿ ಮಕ್ಕಳನ್ನೂ ನಂಬುವುದಿಲ್ಲ. ಅಂಥವರನ್ನು ಕುರಿತೇ ಈ ಗಾದೆ ಹುಟ್ಟಿಕೊಂಡಿದೆ.

**"ಅಡ್ಡಗೋಡೆಯ ಮೇಲೆ ದೀಪವಿಟ್ಟ ಹಾಗೆ"**

ಅಡ್ಡಗೋಡೆಯ ಮೇಲೆ ದೀಪವಿಟ್ಟರೆ ಎರಡು ಕಡೆಗೂ ಸ್ವಲ್ಪ ಸ್ವಲ್ಪ ಬೆಳಕು ಬೀಳುತ್ತದೆ. ಎರಡು ಕೋಣೆಗಳಿಗೂ ಪೂರ್ಣ ಬೆಳಕು ಬೀಳುವುದಿಲ್ಲ. ಹಾಗೆಯೇ ಕೆಲವರು ಯಾವುದನ್ನೂ ನಿಶ್ಚಿತವಾಗಿ ಹೇಳುವುದಿಲ್ಲ. ಅವರು ಕೆಲಸವನ್ನು ಪೂರ್ಣವಾಗಿ ಒಪ್ಪಿಕೊಳ್ಳುವುದೂ ಇಲ್ಲ ಅಥವಾ ಪೂರ್ಣವಾಗಿ ನಿರಾಕರಿಸುವುದೂ ಇಲ್ಲ. ನೋಡೋಣ, ನೋಡೋಣ ಎಂದು ಹೇಳುತ್ತಿರುತ್ತಾರೆ. ಇಂಥ ಅನಿಶ್ಚಯ ಕುರಿತ ಸಂದರ್ಭದಲ್ಲಿ ಈ ಗಾದೆ ಬಳಕೆಗೆ ಬಂದಿದೆ.

**"ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ"**

ನಾಯಿ ಬಾಲ ಡೊಂಕಾಗಿರುತ್ತದೆ. ಅದನ್ನು ನೆಟ್ಟಗಾಗಿಸಲು ಅದಕ್ಕೆ ದಬ್ಬೆ ಕಟ್ಟಿದರೆ, ದಬ್ಬೆ ಬಿಚ್ಚುವವರೆಗೆ ಮಾತ್ರ ಆ ಬಾಲ ನೆಟ್ಟಗಿರುತ್ತದೆ. ದಬ್ಬೆ ಬಿಚ್ಚಿದ ತಕ್ಷಣ ಪುನಃ ಅದರ ಬಾಲ ಡೊಂಕಾಗುತ್ತದೆ. ಏಕೆಂದರೆ ನಾಯಿಯ ಬಾಲ ಸಹಜವಾಗಿ ಡೊಂಕಾಗಿರುತ್ತದೆ. ಅದನ್ನು ನೆಟ್ಟಗೆ ಮಾಡಲು ಬರುವುದಿಲ್ಲ. ಅದೇ ರೀತಿ ಕೆಲವರ ಗುಣಗಳನ್ನು, ಸ್ವಭಾವಗಳನ್ನು ತಾತ್ಕಾಲಿಕವಾಗಿ ಬದಲಾಯಿಸಬಹುದೇ ವಿನಃ ಶಾಶ್ವತವಾಗಿ ಬದಲಾಯಿಸಲಾಗುವುದಿಲ್ಲ. ಅವರು ಕ್ರಮೇಣ ಮೊದಲಿನ ಗುಣ, ಸ್ವಭಾವಗಳಿಗೇ ಹಿಂದಿರುಗುತ್ತಾರೆ. ಇಂಥಹ ಸಹಜ ಗುಣ ಕುರಿತ ಗಾದೆ ಇದು.

**"ಕಪ್ಪೆ ತಕ್ಕಡಿಗೆ ಹಾಕಿದ ಹಾಗೆ"**

ಒಬ್ಬನು ಕಪ್ಪೆಗಳನ್ನು ತೂಕ ಮಾಡುವುದಕ್ಕೆ ಹೋದ. ತಕ್ಕಡಿಯ ಒಂದು ಕಡೆ ತೂಕದ ಬಟ್ಟುಗಳನ್ನಿಟ್ಟು, ಮತ್ತೊಂದು ಕಡೆ ಕಪ್ಪೆಗಳನ್ನು ಹಾಕಿ ದಂಡಿಗೆ ಎತ್ತಿದ. ಅಷ್ಟರಲ್ಲಿ ಕೆಲವು ಕಪ್ಪೆಗಳು ತಕ್ಕಡಿಯಿಂದ ಹೊರಗೆ ಹಾರಿದ್ದವು. ಆಗ ಅವನು ಹಾರಿದ ಕಪ್ಪೆಗಳನ್ನು ಪುನಃ ತಕ್ಕಡಿಗೆ ಹಾಕಿದ. ಅಷ್ಟರಲ್ಲಿ ಮತ್ತೆ ಕೆಲವು ಕಪ್ಪೆಗಳು ಹೊರಗೆ ನೆಗೆದಿದ್ದವು. ಅಂತೂ ಇಂತೂ ಅವನಿಗೆ ಕಪ್ಪೆಗಳನ್ನು ತೂಕ ಮಾಡುವುದಕ್ಕೆ ಆಗಲಿಲ್ಲ. ಅದೇ ರೀತಿ ಕೆಲವು ಜನರನ್ನು ಯಾವುದಾದರೂ ಒಂದು ಕಾರ್ಯಕ್ಕಾಗಿ ಒಟ್ಟುಗೂಡಿಸಲು ಹೋದಾಗ, ಒಬ್ಬರು ಬಂದರೆ ಒಬ್ಬರು ಬರುವುದಿಲ್ಲ. ಇಂಥ ಸಂದರ್ಭದಲ್ಲಿ ಈ ಗಾದೆ ಬಳಕೆಗೆ ಬಂದಿದೆ.

# ಗಾದೆಗಳ ಲೋಕ

"ವೇದಗಳು ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ" ಎಂಬುದು ಮತ್ತೊಂದು ಹೇಳಿಕೆ. ಅಂದರೆ ಗಾದೆ ಸತ್ಯಕ್ಕೆ ಹೆಚ್ಚು ಹತ್ತಿರವಾದದ್ದು ಎಂಬುದು ಇದರ ಅರ್ಥ. ಗಾದೆಗಳು ಅನುಭವದ ನುಡಿಗಳಾದುದರಿಂದ ಸತ್ಯಕ್ಕೆ ಅತಿ ಸಮೀಪದಲ್ಲಿರುತ್ತವೆ. ಇವು ಜನರಿಂದ ಜನರಿಗೆ ಮಾತಿನ ಮೂಲಕ ಹರಿದು ಬಂದಿರುತ್ತವೆ. ಹಾಗಾಗಿ ಇವು ಬರವಣಿಗೆಯ ರೂಪವಿಲ್ಲದೆ ಮೌಖಿಕ ರೂಪದಲ್ಲಿ ಹೆಚ್ಚು ಬಳಕೆಯಲ್ಲಿವೆ. ಶತಶತಮಾನಗಳಿಂದ ಇವು ಮೌಖಿಕ ರೂಪದಲ್ಲೇ ಬಳಕೆಯಲ್ಲಿದ್ದು ಜನ ಇವುಗಳನ್ನು ನೆನಪಿಟ್ಟುಕೊಂಡು ಸಂರಕ್ಷಿಸಿಕೊಂಡು ಬಂದಿದ್ದಾರೆ. ತಲೆ ಮಾರುಗಳಿಂದ ತಲೆಮಾರಿಗೆ ಮೌಖಿಕವಾಗಿಯೇ ವರ್ಗಾಯಿಸಲ್ಪಟ್ಟಿದೆ. ಗಾದೆಗಳು ಜನಪದ ಸಾಹಿತ್ಯದ ಪ್ರಮುಖ ಪ್ರಕಾರವಾಗಿದೆ.

**ಕರ್ನಾಟಕ ಜಾನಪದ ಪರಿಷತ್ತು**
ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೬೦